**ಆಕ್ಸಿಸ್ ಬ್ಯಾಂಕ್ ವರ್ಚುವಲ್ ಗಿಫ್ಟ್ ಕಾರ್ಡ್‌ಗೆ ಅನ್ವಯಿಸುವ ನಿಯಮಗಳು ಮತ್ತು ಷರತ್ತುಗಳು**

ಈ ನಿಯಮಗಳು ಮತ್ತು ಷರತ್ತುಗಳು ಅಕ್ಸಿಸ್ ಬ್ಯಾಂಕ್ ವರ್ಚುವಲ್ ಗಿಫ್ಟ್ ಕಾರ್ಡ್ ('ಕಾರ್ಡ್') ಬಳಕೆಯನ್ನು ಒಳಗೊಂಡ ಎಲ್ಲಾ ವ್ಯವಹಾರಗಳಿಗೆ ಅನ್ವಯಿಸುತ್ತವೆ ಮತ್ತು ಕಾರ್ಡ್ ಅನ್ನು ಬ್ಯಾಂಕ್ ಹೊರತರುವ ಸಂಬಂಧದಲ್ಲಿ, ಕಾರ್ಡ್‌ಧಾರಕ ಮತ್ತು ಬ್ಯಾಂಕ್ ನಡುವೆ ಇರುವ ಸಂಪೂರ್ಣ ಒಪ್ಪಂದವನ್ನು ರೂಪಿಸುತ್ತವೆ. ಈ ನಿಯಮಗಳು ಮತ್ತು ಷರತ್ತುಗಳ ಸಂಬಂಧದಲ್ಲಿ:

- ಏಕವಚನಕ್ಕೆ ಮಾಡಿದ ಎಲ್ಲಾ ಉಲ್ಲೇಖಗಳು ಬಹುವಚನವನ್ನು ಸಹ ಒಳಗೊಂಡಿರುತ್ತವೆ ಮತ್ತು ಪುಲ್ಲಿಂಗಕ್ಕೆ ಮಾಡಿದ ಉಲ್ಲೇಖಗಳು ಸ್ತ್ರೀಲಿಂಗವನ್ನೂ ಒಳಗೊಂಡಿರುತ್ತವೆ.
- ವಿಧಿಗಳ ಶೀರ್ಷಿಕೆಗಳು ಕೇವಲ ಸೌಕರ್ಯಕ್ಕಾಗಿ ಮಾತ್ರ ನೀಡಲ್ಪಟ್ಟಿವೆ ಮತ್ತು ಸಂಬಂಧಿತ ವಿಧಿಯ ಅರ್ಥವನ್ನು ಯಾವುದೇ ರೀತಿಯಲ್ಲಿ ಪರಿಣಾಮಗೊಳಿಸುವುದಿಲ್ಲ. ಇಲ್ಲಿ ಒಳಗೊಂಡಿರುವ ಯಾವುದೇ ವಿಧಾನವನ್ನು ಸಮರ್ಪಕ ನ್ಯಾಯಾಧಿಕಾರ ಹೊಂದಿರುವ ಯಾವುದೇ ನ್ಯಾಯಾಲಯವು ಅಕ್ರಮ, ಅಮಾನ್ಯ ಅಥವಾ ಜಾರಿಗೆ ಬಾರದದ್ದು ಎಂದು ನಿರ್ಧರಿಸಿದಲ್ಲಿ, ಆ ವಿಧಾನವನ್ನು ಇಲ್ಲಿ ನುಂಡಿ ಅಳಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಉಳಿದ ನಿಯಮಗಳು ಮತ್ತು ಷರತ್ತುಗಳು ಸಂಪೂರ್ಣವಾಗಿ ಜಾರಿಯಲ್ಲಿ ಮುಂದುವರಿಯುತ್ತವೆ.

**ವ್ಯಾಖ್ಯಾನಗಳು**

ಈ ದಸ್ತಾವೇಜಿನಲ್ಲಿ, ಕೆಳಗಿನ ಪದಗಳು ಮತ್ತು ಪದಬಂಧಗಳಿಗೆ ಕೆಳಗಿನ ಅರ್ಥಗಳು ಅನ್ವಯಿಸುತ್ತವೆ:

1. 'ಏಟಿಎಂ' ಎಂದರೆ ಸ್ವಯಂಚಾಲಿತ ಟೆಲರ್ ಯಂತ್ರ.
2. 'ಅರ್ಜಿದಾರ' ಎಂದರೆ ಕಾರ್ಡ್ ಸಂಬಂಧದಲ್ಲಿ, ವರ್ಚುವಲ್ ಕಾರ್ಡ್‌ಗಾಗಿ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿ, ಬ್ಯಾಂಕ್‌ನಿಂದ ವರ್ಚುವಲ್ ಕಾರ್ಡ್ ಸ್ವೀಕರಿಸುವ ವ್ಯಕ್ತಿ.
3. 'ಲಭ್ಯವಿರುವ ಮೊತ್ತ' ಎಂದರೆ ಕಾರ್ಡ್ ಸಂಬಂಧದಲ್ಲಿ, ನಿರ್ದಿಷ್ಟ ಸಮಯದಲ್ಲಿ ವರ್ಚುವಲ್ ಕಾರ್ಡ್‌ನಲ್ಲಿ ಬಳಕೆಗೆ ಲಭ್ಯವಿರುವ ಮೊತ್ತ, ಅಂದರೆ ಕಾರ್ಡ್ ಖಾತೆಗೆ ಜಮಾ ಮಾಡಲಾದ ಮೊತ್ತ(ಗಳು)ಯಿಂದ ಕಾರ್ಡ್ ಬಳಸಿ ನಡೆಸಿದ ವ್ಯವಹಾರ(ಗಳು)ಗಾಗಿ ಬಳಸಲ್ಪಟ್ಟ ಮೊತ್ತ(ಗಳು) ಕಡಿತಗೊಂಡ ನಂತರ ಉಳಿದಿರುವ ಮೊತ್ತ.
4. 'ಬ್ಯಾಂಕ್' ಎಂದರೆ ಭಾರತದಲ್ಲಿ ಕಂಪನಿಗಳ ಕಾಯಿದೆ, 1956 ಅಡಿಯಲ್ಲಿ ಸ್ಥಾಪಿತವಾಗಿರುವ ಮತ್ತು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ಅರ್ಥದಲ್ಲಿ ಬ್ಯಾಂಕಿಂಗ್ ಕಂಪನಿಯಾಗಿರುವ ಅಕ್ಸಿಸ್ ಬ್ಯಾಂಕ್ ಲಿಮಿಟೆಡ್, ಇದರ ನೋಂದಾಯಿತ ಕಚೇರಿ 'ತ್ರಿಶೂಲ್', ತೃತೀಯ ಮಹಡಿ, ಸಮರ್ಥೇಶ್ವರ ದೇವಸ್ಥಾನದ ಎದುರು, ಲಾ ಗಾರ್ಡನ್

ಸಮೀಪ, ಎಲಿಸ್‌ಬ್ರಿಡ್ಜ್, ಅಹಮದಾಬಾದ್ – 380006 ನಲ್ಲಿ ಇದೆ, ಮತ್ತು ಇದರ ಉತ್ತರಾಧಿಕಾರಿಗಳು ಹಾಗೂ ಹಕ್ಕುಪತ್ರ ಪಡೆದವರನ್ನೂ ಒಳಗೊಂಡಿರುತ್ತದೆ.

5. 'ಲಾಭಾಂಶಿ' ಎಂದರೆ ಕಾರ್ಡ್ ಸಂಬಂಧದಲ್ಲಿ, ಅರ್ಜಿದಾರರಿಂದ ಉಡುಗೊರೆಯಾಗಿ ವರ್ಚುವಲ್ ಗಿಫ್ಟ್ ಕಾರ್ಡ್ ಸ್ವೀಕರಿಸಿ, ಅರ್ಜಿದಾರರ ಬಾಧ್ಯತೆಗಳನ್ನು ಸ್ವೀಕರಿಸುವ ಹಾಗೂ ಅದರ ಒಪ್ಪಂದದ ವಿಧಿಗಳನ್ನು ಪಾಲಿಸಲು ಒಪ್ಪುವ ವ್ಯಕ್ತಿ. ಆದಾಗ್ಯೂ, ಬ್ಯಾಂಕ್ ಇಂತಹ ಇತರ ವ್ಯಕ್ತಿಯ ʼxÀ§AzsÀzÀ°è ಯಾವುದೇ ರೀತಿಯಲ್ಲಿ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.
6. 'ಕಾರ್ಡ್' ಎಂದರೆ ಇಲ್ಲಿ ಉಲ್ಲೇಖಿತ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಬ್ಯಾಂಕ್ ಕಾರ್ಡ್‌ಧಾರಕನಿಗೆ ಹೊರತರುವ ವರ್ಚುವಲ್ ಗಿಫ್ಟ್ ಕಾರ್ಡ್.
7. 'ಕಾರ್ಡ್‌ಧಾರಕ' ಎಂದರೆ ಕಾರ್ಡ್ ಸಂಬಂಧದಲ್ಲಿ, ಅರ್ಜಿದಾರ ಅಥವಾ ಕಾರ್ಡ್‌ನ ಲಾಭಾಂಶಿ.
8. 'ಕಾರ್ಡ್ ಖಾತೆ' ಎಂದರೆ ಕಾರ್ಡ್ ಸಂಬಂಧದಲ್ಲಿ ಬ್ಯಾಂಕ್ ನಿರ್ವಹಿಸುವ ಖಾತೆ.
9. 'ಇಡಿಸಿ' ಎಂದರೆ ಎಲೆಕ್ಟ್ರಾನಿಕ್ ಡೇಟಾ ಕ್ಯಾಪ್ಚರ್ ಟರ್ಮಿನಲ್, ಮುದ್ರಕ, ಇತರ ಉಪಕರಣಗಳು ಮತ್ತು ಪರಿಕರಗಳು ಹಾಗೂ ಆ ಸಾಧನವನ್ನು ಕಾರ್ಯಗತಗೊಳಿಸಲು ಅಗತ್ಯವಾದ ತಂತ್ರಾಂಶ.
10. 'ವ್ಯಾಪಾರಿ' ಅಥವಾ 'ವ್ಯಾಪಾರ ಸಂಸ್ಥೆಗಳು' ಎಂದರೆ ಎಲ್ಲೆಡೆ ಸ್ಥಾಪಿತವಾಗಿರುವ ಮತ್ತು ಕಾರ್ಡ್ ಅನ್ನು ಸ್ವೀಕರಿಸುವ / ಮಾನ್ಯಗೊಳಿಸುವ ಸಂಸ್ಥೆಗಳು, ಮತ್ತು ಇವುಗಳಲ್ಲಿ ಅಂಗಡಿಗಳು, ಮಳಿಗೆಗಳು, ಉಪಹಾರ ಮಂದಿರಗಳು ಇತ್ಯಾದಿ ಸೇರಿರುತ್ತವೆ, ಇವುಗಳನ್ನು ಬ್ಯಾಂಕ್ ಮತ್ತು / ಅಥವಾ ವೀಸಾ / ಮಾಸ್ಟರ್‌ಕಾರ್ಡ್ / ರೂಪೇ ಮೂಲಕ ಜಾಹೀರಾತು ಮಾಡಲಾಗುತ್ತದೆ.
11. 'ಪಿಒಎಸ್' ಎಂದರೆ ಮಾರಾಟ ಸ್ಥಳ ಟರ್ಮಿನಲ್.
12. 'ವ್ಯವಹಾರ' ಎಂದರೆ ಬ್ಯಾಂಕ್ ದಾಖಲೆಗಳಲ್ಲಿ ಕಾಣಿಸಿಕೊಳ್ಳುವ ಸೂಚನೆ, ವಿಚಾರಣೆ ಅಥವಾ ಸಂವಹನ, ಇದು ಕಾರ್ಡ್‌ಧಾರಕನು ಕಾರ್ಡ್ ಬಳಸಿ ನೇರವಾಗಿ ಅಥವಾ ಪರೋಕ್ಷವಾಗಿ ಬ್ಯಾಂಕ್‌ಗೆ ನೀಡುವದು, ಇಡಿಸಿ, ಪಿಒಎಸ್ ಅಥವಾ ಬ್ಯಾಂಕ್ ಅಥವಾ ಬ್ಯಾಂಕ್‌ನ ಹಂಚಿಕೆಯ ಜಾಲತಾಣದ ಇತರ ಯಾವುದೇ ಸಾಧನದ ಮೂಲಕ ವ್ಯವಹಾರವನ್ನು ಪರಿಣಾಮಗೊಳಿಸುವ ಉದ್ದೇಶದಿಂದ.
13. 'ವೀಸಾ' ಎಂದರೆ ವೀಸಾ ಇಂಟರ್‌ನ್ಯಾಷನಲ್‌ಗೆ ಸೇರಿದ ವ್ಯಾಪಾರ ಚಿಹ್ನೆ.
14. 'ಮಾಸ್ಟರ್‌ಕಾರ್ಡ್' ಎಂದರೆ ಮಾಸ್ಟರ್‌ಕಾರ್ಡ್‌ಗೆ ಸೇರಿದ ವ್ಯಾಪಾರ ಚಿಹ್ನೆ.
15. 'ರೂಪೇ' ಎಂದರೆ ಭಾರತದ ರಾಷ್ಟ್ರೀಯ ಪಾವತಿ ನಿಗಮಕ್ಕೆ ಸೇರಿದ ವ್ಯಾಪಾರ ಚಿಹ್ನೆ.

**ಕಾರ್ಡ್ ಮಾನ್ಯತೆ ಮತ್ತು ಬಳಕೆ**

1. ಕಾರ್ಡ್ ರಚನೆಯ ದಿನಾಂಕದಿಂದ 3 ವರ್ಷಗಳ ಅವಧಿಗೆ ಕಾರ್ಡ್ ಮಾನ್ಯವಾಗಿರುತ್ತದೆ.

2. ಕಾರ್ಡ್‌ನ ಗರಿಷ್ಠ ಮಾನ್ಯತೆ ಅವಧಿ ರಚನೆಯ ದಿನಾಂಕದಿಂದ ಮೂರು ವರ್ಷಗಳು ಆಗಿರುತ್ತದೆ, ಉದಾಹರಣೆಗೆ (Jul-25 ರಿಂದ Jul-28). ಕಾರ್ಡ್ ತನ್ನ ಮಾನ್ಯತೆ ಅವಧಿಯಾಗಿ ಸೂಚಿಸಲಾದ ತಿಂಗಳ ಕೊನೆಯ ದಿನದವರೆಗೆ ಮಾನ್ಯವಾಗಿರುತ್ತದೆ. ಆದಾಗ್ಯೂ, ಉಲ್ಲೇಖಿತ ಅವಧಿ ಮುಕ್ತಾಯಗೊಳ್ಳುವ ಮೊದಲು ಕಾರ್ಡ್‌ನಲ್ಲಿರುವ ಶೇಷ ಮೊತ್ತ ಶೂನ್ಯಕ್ಕೆ ತಲುಪಿದಲ್ಲಿ, ಕಾರ್ಡ್ ಮಾನ್ಯತೆಯನ್ನು ಕಳೆದುಕೊಳ್ಳುತ್ತದೆ.

3. ಕಾರ್ಡ್ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗೆ ಮಾಡುವ ಎಲ್ಲಾ ಸಂವಹನಗಳನ್ನು ಕೇವಲ ಅರ್ಜಿದಾರನೇ ಮಾಡಬೇಕು. ಕಾರ್ಡ್‌ಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಮಾಡುವ ಯಾವುದೇ ಸಂವಹನವನ್ನು ಬ್ಯಾಂಕ್‌ನ ವೆಬ್‌ಸೈಟ್ ಮೂಲಕ ಅಥವಾ ನೇರವಾಗಿ ಅರ್ಜಿದಾರರಿಗೆ ತಿಳಿಸಲಾಗುತ್ತದೆ.

4. ಕಾರ್ಡ್ ಅನ್ನು ಆ ಸಮಯದಲ್ಲಿ ಲಭ್ಯವಿರುವ ಮೊತ್ತದವರೆಗೆ ಮಾತ್ರ ವ್ಯವಹಾರಗಳಿಗಾಗಿ ಬಳಸಬಹುದು.

5. ಕಾರ್ಡ್ ಅನ್ನು ಕೇವಲ ಕಾರ್ಡ್‌ಧಾರಕನೇ ಬಳಸಬೇಕು ಮತ್ತು ಇದು ವರ್ಗಾಯಿಸಬಹುದಾದುದಲ್ಲ.

6. ಕಾರ್ಡ್‌ನಲ್ಲಿ ಯಾವುದೇ ವ್ಯವಹಾರ ನಡೆದ ನಂತರ, ಆ ವ್ಯವಹಾರದ ಮೊತ್ತವನ್ನು ಆ ಸಮಯದ ಲಭ್ಯವಿರುವ ಮೊತ್ತದಿಂದ ಕಡಿತಗೊಳಿಸಿ, ಹೊಸ ಲಭ್ಯವಿರುವ ಮೊತ್ತವನ್ನು ನಿರ್ಧರಿಸಲಾಗುತ್ತದೆ. ವ್ಯವಹಾರವನ್ನು ಪ್ರಕ್ರಿಯೆಗೊಳಿಸಲು ಅಗತ್ಯವಾದಷ್ಟು ಲಭ್ಯವಿರುವ ಮೊತ್ತ ಕಾರ್ಡ್‌ನಲ್ಲಿ ಇಲ್ಲದಿದ್ದಲ್ಲಿ, ಆ ವ್ಯವಹಾರವನ್ನು ಪ್ರಕ್ರಿಯೆಗೊಳಿಸಲಾಗುವುದಿಲ್ಲ.

7. ಕಾರ್ಡ್ ಬಳಕೆಯನ್ನು ಅಕ್ಸಿಸ್ ಬ್ಯಾಂಕ್ ಪೂರ್ವಪಾವತಿ ಕಾರ್ಡ್‌ನ ನಿಯಮಗಳು ಮತ್ತು ಷರತ್ತುಗಳ ಸ್ವೀಕೃತಿಯಾಗಿದೆ ಎಂದು ಪರಿಗಣಿಸಲಾಗುತ್ತದೆ.

8. ಕಾರ್ಡ್‌ನಲ್ಲಿ ಲಭ್ಯವಿರುವ / ಲೋಡ್ ಮಾಡಲಾದ ಮೊತ್ತದ ಮೇಲೆ ಬ್ಯಾಂಕ್ ಯಾವುದೇ ಬಡ್ಡಿಯನ್ನು ಪಾವತಿಸುವುದಿಲ್ಲ.

9. ಕಾರ್ಡ್‌ಧಾರಕನು ಕಾರ್ಡ್‌ಗೆ ಕೇವಲ ಒಂದೇ ಬಾರಿ ಲೋಡ್ ಮಾಡಬಹುದು, ಗರಿಷ್ಠ ಮಿತಿ ₹ 10,000/- (ಹತ್ತು ಸಾವಿರ ಮಾತ್ರ) ಅಥವಾ ಬ್ಯಾಂಕ್ ತನ್ನ ಆಂತರಿಕ ಮತ್ತು ಅನ್ವಯಿಸುವ ನಿಯಂತ್ರಣಾತ್ಮಕ ಹಾಗೂ ಕಾನೂನು ಮಾರ್ಗಸೂಚಿಗಳಿಗೆ ಒಳಪಟ್ಟಂತೆ ನಿರ್ದಿಷ್ಟಪಡಿಸುವ ಇತರೆ ಮಿತಿಯವರೆಗೆ. ನಂತರ ಕಾರ್ಡ್‌ಧಾರಕನಿಂದ ಮತ್ತು / ಅಥವಾ ಯಾವುದೇ ಇತರ ವ್ಯಕ್ತಿಯಿಂದ ಕಾರ್ಡ್ ಮರುಲೋಡ್ ಮಾಡಲು ಅವಕಾಶ ಇರುವುದಿಲ್ಲ.

10. 1.10 ಅಕ್ಸಿಸ್ ಬ್ಯಾಂಕ್ ವರ್ಚುವಲ್ ಗಿಫ್ಟ್ ಕಾರ್ಡ್‌ಗಳು ಭಾರತದಲ್ಲಿನ ಯಾವುದೇ ವೀಸಾ / ಮಾಸ್ಟರ್‌ಕಾರ್ಡ್ / ರೂಪೇ ಸಕ್ರಿಯಗೊಳಿಸಲಾದ ಆನ್‌ಲೈನ್ ಪೋರ್ಟಲ್‌ಗಳಲ್ಲಿ ಬಳಕೆಗೆ ಸಂಪೂರ್ಣ ಭದ್ರತೆಯನ್ನು ಒದಗಿಸುತ್ತವೆ.

11. 1.11 ಬ್ಯಾಂಕ್ ಕಾರ್ಡ್ ಜೊತೆಗೆ ಶೇಷ ಮೊತ್ತ ವಿಚಾರಣೆ ಮತ್ತು ಖಾತೆ ವಿವರ ವಿಚಾರಣೆಗಾಗಿ ಮಾತ್ರ ಇಂಟರ್ನೆಟ್ ಬ್ಯಾಂಕಿಂಗ್ ಪ್ರವೇಶವನ್ನು ಒದಗಿಸುತ್ತದೆ. ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಹಣ ವರ್ಗಾವಣೆ ಸೌಲಭ್ಯಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

12. 1.12 ಕೊನೆಯ ವ್ಯವಹಾರದ ದಿನಾಂಕದಿಂದ 10 ವರ್ಷಗಳ ಅವಧಿಗೆ ಪೂರ್ವಪಾವತಿ ಕಾರ್ಡ್‌ನಲ್ಲಿ ಬಳಸದ ಅಥವಾ ಹಿಂತೆಗೆದುಕೊಳ್ಳದ ಯಾವುದೇ ಶೇಷ ಮೊತ್ತವನ್ನು ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸಲಾಗುತ್ತದೆ.

**ಕಾರ್ಡ್‌ಗೆ ಅರ್ಜಿ**

1. ಕಾರ್ಡ್ ಸೌಲಭ್ಯವನ್ನು ಪಡೆಯಲು ಬಯಸುವ ವ್ಯಕ್ತಿಯು, ಬ್ಯಾಂಕ್ ನಿರ್ದಿಷ್ಟಪಡಿಸಿದ ವರ್ಚುವಲ್ ಗಿಫ್ಟ್ ಕಾರ್ಡ್ ಅರ್ಜಿ ಸಹ ಠೇವಣಿ ನಮೂನೆಯಲ್ಲಿ, ಕಾರ್ಡ್ ಖಾತೆಗೆ ಠೇವಣಿ ಮಾಡಬೇಕಾದ ಮೊತ್ತದೊಂದಿಗೆ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಬೇಕು.
2. ಬ್ಯಾಂಕ್ ಯಾವುದೇ ಕಾರಣವನ್ನು ತಿಳಿಸದೆ ಯಾವುದೇ ಅರ್ಜಿಯನ್ನು ಪರಿಗಣಿಸದಿರುವ ಪೂರ್ಣ ಸ್ವೈಚ್ಛಿಕ ಅಧಿಕಾರವನ್ನು ಹೊಂದಿರುತ್ತದೆ.
3. ಕಾರ್ಡ್ ಸಂಬಂಧದಲ್ಲಿ ಕಾರ್ಡ್‌ಧಾರಕನು ಬ್ಯಾಂಕ್‌ಗೆ ಠೇವಣಿ ಮಾಡಿದ ಮೊತ್ತ(ಗಳನ್ನು), ಬ್ಯಾಂಕ್ ಸಂಬಂಧಿತ ಕಾರ್ಡ್ ಖಾತೆಗೆ ಜಮಾ ಮಾಡುತ್ತದೆ.

**ಕಾರ್ಡ್ ಭದ್ರತೆ**

1. ಕಾರ್ಡ್‌ನ ಭದ್ರತೆಗೆ ಕಾರ್ಡ್‌ಧಾರಕನೇ ಹೊಣೆಗಾರರಾಗಿರಬೇಕು ಮತ್ತು ಕಾರ್ಡ್‌ನ ಸುರಕ್ಷಿತ ಬಳಕೆಯನ್ನು ಖಚಿತಪಡಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು.

**ಕಾರ್ಡ್‌ಧಾರಕರ ಬಾಧ್ಯತೆಗಳು ಮತ್ತು ಒಪ್ಪಂದಗಳು**

1. ಕಾರ್ಡ್‌ಧಾರಕರು ತಮ್ಮ ವಿಳಾಸದಲ್ಲಿ ಯಾವುದೇ ಬದಲಾವಣೆ ಉಂಟಾದಲ್ಲಿ ತಕ್ಷಣವೇ ಬ್ಯಾಂಕ್‌ಗೆ ತಿಳಿಸಬೇಕು.
2. ಎಲ್ಲಾ ವ್ಯವಹಾರಗಳಿಗೆ ಹಾಗೂ ಸಂಬಂಧಿತ ಶುಲ್ಕಗಳಿಗೆ ಕಾರ್ಡ್‌ಧಾರಕರು ಹೊಣೆಗಾರರಾಗಿರುತ್ತಾರೆ.
3. ಕಾರ್ಡ್‌ಧಾರಕರು ತಮ್ಮ ವಿನಂತಿ ಮತ್ತು ತಮ್ಮ ಸ್ವಂತ ಅಪಾಯದ ಮೇಲೆ ಬ್ಯಾಂಕ್ ಅವರಿಗೆ ಕಾರ್ಡ್ ಒದಗಿಸಲು ಒಪ್ಪಿಕೊಂಡಿರುವುದನ್ನು ಅಂಗೀಕರಿಸುತ್ತಾರೆ ಹಾಗೂ ತಮ್ಮ ಕಾರ್ಡ್ ಬಳಸಿ ದಾಖಲಾದ ಎಲ್ಲಾ ವ್ಯವಹಾರಗಳಿಗೆ ಪೂರ್ಣ ಹೊಣೆಗಾರಿಕೆಯನ್ನು ಸ್ವೀಕರಿಸುತ್ತಾರೆ.
4. ಕಾರ್ಡ್ ಮೂಲಕ ನೀಡಿದ ಯಾವುದೇ ಸೂಚನೆಯನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ.
5. ಕಾರ್ಡ್ ಬಳಕೆ ಅವರ ತಿಳುವಳಿಕೆಯಿಂದ ಅಥವಾ ಅವರ ಸ್ಪಷ್ಟ ಅಥವಾ ಪರೋಕ್ಷ ಅನುಮತಿಯೊಂದಿಗೆ ಪ್ರಕ್ರಿಯೆಗೊಳಿಸಲ್ಪಟ್ಟಿರಲಿ ಅಥವಾ ಇಲ್ಲದಿರಲಿ, ಎಲ್ಲಾ ಸಂದರ್ಭಗಳಲ್ಲಿಯೂ ಕಾರ್ಡ್ ಬಳಕೆಗೆ ಕಾರ್ಡ್‌ಧಾರಕರು ಪೂರ್ಣ ಹೊಣೆಗಾರಿಕೆಯನ್ನು ಸ್ವೀಕರಿಸಬೇಕು.
6. ಕಾರ್ಡ್ ಬಳಸಿ ನಡೆಸಿದ ವ್ಯವಹಾರಗಳಿಗೆ ಬಳಸಲ್ಪಟ್ಟ ಮೊತ್ತಗಳನ್ನು ತಮ್ಮ ಕಾರ್ಡ್ ಖಾತೆಯಿಂದ ಕಡಿತಗೊಳಿಸಲು ಕಾರ್ಡ್‌ಧಾರಕರು ಬ್ಯಾಂಕ್‌ಗೆ ಹಿಂತೆಗೆದುಕೊಳ್ಳಲಾಗದ ರೀತಿಯಲ್ಲಿ ಅನುಮತಿ ನೀಡುತ್ತಾರೆ.

7. ವ್ಯವಹಾರ ಆಧಾರದ ಮೇಲೆ ಸದ್ಭಾವನೆಯಿಂದ ಮತ್ತು ಸಾಮಾನ್ಯ ವ್ಯವಹಾರ ಕ್ರಮದಲ್ಲಿ ಬ್ಯಾಂಕ್ ಕೈಗೊಂಡ ಕ್ರಮಗಳ ಕುರಿತು, ಕಾರ್ಡ್‌ಧಾರಕರು ಬ್ಯಾಂಕ್‌ಗೆ ಪೂರ್ಣವಾಗಿ ಪರಿಹಾರ ನೀಡಿ, ಬ್ಯಾಂಕನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಬೇಕು.
8. ಬ್ಯಾಂಕ್ ವ್ಯವಹಾರಗಳನ್ನು ಜಾರಿಗೊಳಿಸುವಲ್ಲಿ ತನ್ನ ಅತ್ಯುತ್ತಮ ಪ್ರಯತ್ನಗಳನ್ನು ಮಾಡುತ್ತದೆ; ಆದಾಗ್ಯೂ, ವ್ಯವಹಾರ ಅಥವಾ ಸೂಚನೆಯನ್ನು ಜಾರಿಗೊಳಿಸುವಲ್ಲಿ ವಿಳಂಬವಾಗಿರುವುದರಿಂದ ಅಥವಾ ಅಸಮರ್ಥತೆಯಿಂದ ಅಥವಾ ಯಾವುದೇ ಕಾರಣದಿಂದ ಕಾರ್ಡ್‌ಧಾರಕ ಅಥವಾ ಇತರ ಯಾವುದೇ ವ್ಯಕ್ತಿಗೆ ಉಂಟಾಗುವ ಹೊಣೆಗಾರಿಕೆಯನ್ನು ಬ್ಯಾಂಕ್ ಹೊರುವುದಿಲ್ಲ.
9. ಕಾರ್ಡ್‌ಧಾರಕರು ಯಾವುದೇ ವ್ಯವಹಾರ ಅಥವಾ ಕಾರ್ಡ್ ಖಾತೆಯಲ್ಲಿನ ದಾಖಲೆಯ ಬಗ್ಗೆ ಉಂಟಾಗುವ ಎಲ್ಲಾ ವಿವಾದಗಳನ್ನು ಆ ವ್ಯವಹಾರ ಅಥವಾ ದಾಖಲೆಯ ದಿನಾಂಕದಿಂದ 7 ದಿನಗಳ ಒಳಗೆ ಬ್ಯಾಂಕ್ ಗಮನಕ್ಕೆ ತರಲು ಒಪ್ಪಿಕೊಳ್ಳುತ್ತಾರೆ; ಅದನ್ನು ಮಾಡಲು ವಿಫಲರಾದಲ್ಲಿ, ಎಲ್ಲಾ ವ್ಯವಹಾರಗಳು ಮತ್ತು ಕಾರ್ಡ್ ಖಾತೆಯ ದಾಖಲೆಗಳು ಸರಿಯಾಗಿವೆ ಮತ್ತು ಕಾರ್ಡ್‌ಧಾರಕರಿಂದ ಅಂಗೀಕರಿಸಲ್ಪಟ್ಟಿವೆ ಎಂದು ಪರಿಗಣಿಸಲಾಗುತ್ತದೆ.
10. ಕಾರ್ಡ್ ಖರೀದಿಸುವಾಗ ಖರೀದಿದಾರರು ಪಾವತಿಸಿದ ಮೌಲ್ಯವನ್ನು ಮೀರಿದಂತೆ, ಉದಾಹರಣೆಗೆ ಉಪಹಾರ ಮಂದಿರಗಳಲ್ಲಿ ನೀಡುವ ಟಿಪ್ಪುಗಳು ಮತ್ತು ಇತರೆ ಹೆಚ್ಚುವರಿ ಶುಲ್ಕಗಳು ಸೇರಿದಂತೆ, ಕಾರ್ಡ್‌ನಲ್ಲಿ ಖರ್ಚಾಗಿರುವ ಎಲ್ಲಾ ಮೊತ್ತಗಳನ್ನು ಕಾರ್ಡ್‌ಧಾರಕರು ಬ್ಯಾಂಕ್‌ಗೆ ಪಾವತಿಸಲು ಒಪ್ಪಿಕೊಳ್ಳುತ್ತಾರೆ.
11. ಯಾವುದೇ ಕಾರಣಕ್ಕಾಗಿ ಯೋಜನೆಯನ್ನು ಮುಚ್ಚಲಾಗುತ್ತಿದ್ದರೆ ಅಥವಾ ಆರ್‌ಬಿಐ ನಿರ್ದೇಶನದಂತೆ ಸ್ಥಗಿತಗೊಳಿಸಲು ಸೂಚನೆ ನೀಡಿದಲ್ಲಿ, ಕಾರ್ಡ್‌ನಲ್ಲಿ ಉಳಿದಿರುವ ಬಾಕಿ ಶೇಷ ಮೊತ್ತವನ್ನು ವಾಪಸು ಪಡೆಯಲು ಕಾರ್ಡ್‌ಧಾರಕರಿಗೆ ಅನುಮತಿ ನೀಡಲಾಗುತ್ತದೆ.
12. ಕಾರ್ಡ್‌ಧಾರಕರು ಕ್ರಿಪ್ಟೋ ಕರೆನ್ಸಿ ಖರೀದಿಗಾಗಿ ಕಾರ್ಡ್ ಬಳಸಬಾರದು.
13. 4.13 ವರ್ಚುವಲ್ ಗಿಫ್ಟ್ ಕಾರ್ಡ್ ಅನ್ನು ಡಿಜಿಟಲ್ ರೂಪದಲ್ಲಿ ಎಸ್‌ಎಂಎಸ್ ಅಥವಾ ಇಮೇಲ್ ಮೂಲಕ ಹೊರತರುತ್ತಾರೆ ಮತ್ತು ಇದಕ್ಕೆ ಭೌತಿಕ ಕಾರ್ಡ್ ಇರುವುದಿಲ್ಲ.

**ಬಳಸದಿರುವ ಕಾರ್ಡ್ ಮೊತ್ತ**

1. ಪಿಪಿಐ ಮಾನ್ಯತೆ ಅವಧಿ ಮುಕ್ತಾಯಗೊಳ್ಳುವ ದಿನಾಂಕಕ್ಕಿಂತ 45 ದಿನಗಳ ಮುಂಚಿತವಾಗಿ, ಎಸ್‌ಎಂಎಸ್ / ಇಮೇಲ್ ಮುಂತಾದ ಲಭ್ಯವಿರುವ ಯಾವುದೇ ಸಂವಹನ ಮಾರ್ಗಗಳ ಮೂಲಕ ಗ್ರಾಹಕರಿಗೆ ಮಾಹಿತಿ ನೀಡಲಾಗುತ್ತದೆ.

2. ಕಾರ್ಡ್ ಅವಧಿ ಮುಕ್ತಾಯವಾದ ದಿನಾಂಕದಂದು ಅಥವಾ ಅದರ ನಂತರ ಉಳಿದಿರುವ ಯಾವುದೇ ಬಾಕಿ ಮೊತ್ತವನ್ನು, ಕಾರ್ಡ್‌ಧಾರಕರು ಖರೀದಿಸಿದ ಬ್ಯಾಂಕ್‌ನ ಹೊಸ ಸಮಾನ ಪಾವತಿ ಸಾಧನಕ್ಕೆ ವರ್ಗಾಯಿಸಲು ಅನುಮತಿ ನೀಡಬಹುದು.

**ಕಾರ್ಡ್ ನಿಷ್ಕ್ರಿಯತೆ**

1. ನಿರಂತರವಾಗಿ ಒಂದು ವರ್ಷದ ಅವಧಿಗೆ ಯಾವುದೇ ಆರ್ಥಿಕ ವ್ಯವಹಾರ ನಡೆಯದಿದ್ದಲ್ಲಿ, ಕಾರ್ಡ್‌ಧಾರಕರಿಗೆ ತಿಳಿಸಿ ಬ್ಯಾಂಕ್ ಕಾರ್ಡ್ ಅನ್ನು ನಿಷ್ಕ್ರಿಯಗೊಳಿಸುತ್ತದೆ.
2. ಗ್ರಾಹಕರ ಪರಿಶೀಲನೆಯ ನಂತರ ಮಾತ್ರ, ಗ್ರಾಹಕ ಪೋರ್ಟಲ್ ಮೂಲಕ ಅಥವಾ ಶಾಖೆಯ ಮೂಲಕ ಬೆಂಬಲ ತಂಡದ ಸಹಾಯದಿಂದ ಕಾರ್ಡ್ ಅನ್ನು ಮರುಸಕ್ರಿಯಗೊಳಿಸಲಾಗುತ್ತದೆ.
3. ಇಂತಹ ಕಾರ್ಡ್‌ಗಳ ಕುರಿತು ಆರ್‌ಬಿಐ ನೀಡಿದ ನಿರ್ದೇಶನಗಳ ಪ್ರಕಾರ ವರದಿ ಸಲ್ಲಿಸಲಾಗುತ್ತದೆ.

**ಶುಲ್ಕಗಳು ಮತ್ತು ವಿಧಿಸಲ್ಪಡುವ ದರಗಳು**

1. ವರ್ಚುವಲ್ ಗಿಫ್ಟ್ ಕಾರ್ಡ್‌ಗೆ ಯಾವುದೇ ಶುಲ್ಕ ಇರುವುದಿಲ್ಲ.
2. ಕಾರ್ಡ್ ಬಳಕೆಯ ಸಂದರ್ಭದಲ್ಲಿ ವಿಧಿಸಲ್ಪಡುವ ಯಾವುದೇ ಸರ್ಕಾರಿ ಶುಲ್ಕಗಳು ಅಥವಾ ಹೆಚ್ಚುವರಿ ವಿಧಿಸಲ್ಪಡುವ ಶುಲ್ಕಗಳು ಕಾರ್ಡ್‌ಧಾರಕರ ಹೊಣೆಗಾರಿಕೆಯಾಗಿರುತ್ತದೆ.
3. ಕಾರ್ಡ್‌ಗೆ ಸಂಬಂಧಿಸಿದಂತೆ ಕಾರ್ಡ್‌ಧಾರಕರು ಬ್ಯಾಂಕ್‌ಗೆ ಬಾಕಿ ಇರುವ ಹಣವನ್ನು ವಸೂಲಿಸಲು ಬ್ಯಾಂಕ್‌ಗೆ ಉಂಟಾಗುವ ಯಾವುದೇ ವೆಚ್ಚಗಳನ್ನು (ಕಾನೂನು ಅನುಮತಿಸಿದ ಮಟ್ಟಿಗೆ ಯುಕ್ತವಾದ ವಕೀಲರ ಶುಲ್ಕಗಳನ್ನು ಒಳಗೊಂಡಂತೆ, ಆದರೆ ಇದಕ್ಕೆ ಮಾತ್ರ ಸೀಮಿತವಲ್ಲ) ತಮ್ಮ ಕಾರ್ಡ್‌ನಲ್ಲಿರುವ ಶೇಷ ಮೊತ್ತದಿಂದ ಕಡಿತಗೊಳಿಸಲು ಕಾರ್ಡ್‌ಧಾರಕರು ಬ್ಯಾಂಕ್‌ಗೆ ಅನುಮತಿ ನೀಡುತ್ತಾರೆ ಮತ್ತು ಇಂತಹ ವೆಚ್ಚಗಳಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗೆ ಪೂರ್ಣವಾಗಿ ಪರಿಹಾರ ನೀಡಿ, ಬ್ಯಾಂಕನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಬೇಕು.
4. ಕಾರ್ಡ್‌ಧಾರಕರಿಂದ ಪ್ರತ್ಯೇಕವಾಗಿ ಪಾವತಿಸದಿರುವ ಬಾಕಿ ಮತ್ತು ಪಾವತಿಸಬೇಕಾದ ಮೊತ್ತಗಳನ್ನು ಬ್ಯಾಂಕ್, ಲಭ್ಯವಿರುವ ಮೊತ್ತದಿಂದ ಅಥವಾ ಕಾರ್ಡ್‌ಧಾರಕರ ಬ್ಯಾಂಕ್‌ನ ಇತರೆ ಯಾವುದೇ ಖಾತೆಯಿಂದ ಡೆಬಿಟ್ ಮಾಡುವ ಮೂಲಕ ವಸೂಲಿಸಬಹುದು.

| ಶುಲ್ಕಗಳ ವಿವರ | ವರ್ಚುವಲ್ ಗಿಫ್ಟ್ ಕಾರ್ಡ್ |
|---|---|
| ಮಾನ್ಯತೆ | 3 ವರ್ಷಗಳು |
| ನಗದು ಹಿಂಪಡೆಯುವುದು | ಇಲ್ಲ |
| ಜಾರಿ ಶುಲ್ಕ | ಶೂನ್ಯ |

| | |
|---|---|
| ವಾರ್ಷಿಕ ಶುಲ್ಕ | ಶೂನ್ಯ |
| ಲೋಡಿಂಗ್ ಶುಲ್ಕ | ಶೂನ್ಯ |
| ಕಾರ್ಡ್ ಬದಲಾವಣೆ | ಶೂನ್ಯ |
| ರಿಡಂಪ್ಷನ್ ಶುಲ್ಕ | ₹ 100 + ಜಿಎಸ್‌ಟಿ |
| ಎಟಿಎಂ ನಗದು ಹಿಂಪಡೆಯುವ ಶುಲ್ಕ - ಓನಸ್ | ಅನ್ವಯಿಸುವುದಿಲ್ಲ |
| ಎಟಿಎಂ ನಗದು ಹಿಂಪಡೆಯುವ ಶುಲ್ಕ - ಆಫ್‌ಓನಸ್ - ಪ್ರತಿ ತಿಂಗಳು ಐದು ವ್ಯವಹಾರಗಳು ಉಚಿತ | ಅನ್ವಯಿಸುವುದಿಲ್ಲ |
| ಆರ್ಥಿಕವಲ್ಲದ ವ್ಯವಹಾರ - ಓನಸ್ - ಶೇಷ ವಿಚಾರಣೆ, ಮಿನಿ ಸ್ಟೇಟ್ಮೆಂಟ್, ಪಿನ್ ಮರುಹೊಂದಿಕೆ | ಶೂನ್ಯ |
| ಆರ್ಥಿಕವಲ್ಲದ ವ್ಯವಹಾರ - ಆಫ್‌ಓನಸ್ - ಶೇಷ ವಿಚಾರಣೆ, ಮಿನಿ ಸ್ಟೇಟ್ಮೆಂಟ್, ಪಿನ್ ಮರುಹೊಂದಿಕೆ - ಪ್ರತಿ ತಿಂಗಳು ಐದು ವ್ಯವಹಾರಗಳು ಉಚಿತ | ಅನ್ವಯಿಸುವುದಿಲ್ಲ |

**ಸೌಲಭ್ಯಗಳ ಬದಲಾವಣೆ**

1. ಬ್ಯಾಂಕ್ ತನ್ನ ಪೂರ್ಣ ಸ್ವೈಚ್ಛಿಕ ಅಧಿಕಾರದಿಂದ, ಕಾರ್ಡ್ ಬಳಕೆಗೆ ಹಂಚಿಕೆಯ ಜಾಲತಾಣಗಳ ಮೂಲಕ ಹೆಚ್ಚುವರಿ ಆನ್‌ಲೈನ್ ಮತ್ತು / ಅಥವಾ ಇತರ ಸೇವೆಗಳ ಪ್ರವೇಶವನ್ನು ಲಭ್ಯವಾಗುವಂತೆ ಮಾಡಬಹುದು. ಇಂತಹ ಜಾಲತಾಣಗಳು ವಿಭಿನ್ನ ಕಾರ್ಯಕ್ಷಮತೆ, ಸೇವಾ ಸೌಲಭ್ಯಗಳು ಹಾಗೂ ವಿಭಿನ್ನ ಸೇವೆಗಳು ಮತ್ತು / ಅಥವಾ ಸ್ಥಳಗಳಿಗೆ ವಿಭಿನ್ನ ಶುಲ್ಕಗಳನ್ನು ಒದಗಿಸಬಹುದೆಂಬುದನ್ನು ಕಾರ್ಡ್‌ಧಾರಕರು ಅರಿತು ಒಪ್ಪಿಕೊಳ್ಳುತ್ತಾರೆ.
2. ಬ್ಯಾಂಕ್ ತನ್ನ ಪೂರ್ಣ ಸ್ವೈಚ್ಛಿಕ ಅಧಿಕಾರದಿಂದ, ಯಾವುದೇ ಸಮಯದಲ್ಲಿ, ಕಾರ್ಡ್‌ಧಾರಕರಿಗೆ ಯಾವುದೇ ಪೂರ್ವ ಸೂಚನೆ ನೀಡದೆ, ಕಾರ್ಡ್ ಬಳಕೆ ಸೌಲಭ್ಯವನ್ನು ಮತ್ತು / ಅಥವಾ ಅದರೊಂದಿಗೆ ಸಂಬಂಧಿಸಿದ ಸೇವೆಗಳನ್ನು, ಇ-ಕಾಮರ್ಸ್ ಆನ್‌ಲೈನ್ ಮತ್ತು ಇತರ ಸೇವೆಗಳ ಪ್ರವೇಶವನ್ನು ಹಿಂಪಡೆಯಲು, ನಿಲ್ಲಿಸಲು, ರದ್ದುಗೊಳಿಸಲು, ಸ್ಥಗಿತಗೊಳಿಸಲು ಅಥವಾ ರದ್ದುಪಡಿಸಲು ಹಕ್ಕು ಹೊಂದಿರುತ್ತದೆ. ಇಂತಹ ಸ್ಥಗಿತಗೊಳಿಸುವಿಕೆ ಅಥವಾ ರದ್ದುಪಡಿಸುವಿಕೆಯಿಂದ ಕಾರ್ಡ್‌ಧಾರಕರಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಗಾರರಾಗುವುದಿಲ್ಲ.
3. ನಿರ್ವಹಣೆ: ಸೇವೆಗಳ ಲಭ್ಯತೆಯನ್ನು ಪರಿಣಾಮಗೊಳಿಸುವ ಸಾಧ್ಯತೆ ಇರುವ ನಿರ್ವಹಣಾ ಕಾರ್ಯಗಳಿಗೆ ಮುಂಚಿತ ಸೂಚನೆ ನೀಡಲಾಗುತ್ತದೆ; ಆದಾಗ್ಯೂ, ನಿಯಮಿತ ನಿರ್ವಹಣೆ ಅಥವಾ ಯಾವುದೇ ಇತರ ಕಾರಣಕ್ಕಾಗಿ ಅಗತ್ಯವೆಂದು ಬ್ಯಾಂಕ್ ಪರಿಗಣಿಸಿದಲ್ಲಿ, ಯಾವುದೇ ಪೂರ್ವ ಸೂಚನೆ ನೀಡದೆ, ಇ-ಕಾಮರ್ಸ್ ಆನ್‌ಲೈನ್ / ಅಥವಾ ಇತರ ಸಮಾನ ಸಾಧನಗಳ ಪ್ರವೇಶವನ್ನು ಅಥವಾ ಎಲ್ಲಾ ಅಥವಾ ಯಾವುದೇ ಸೇವೆಗಳ

ಒದಗಿಸುವಿಕೆಯನ್ನು ಯಾವುದೇ ಸಮಯದಲ್ಲಿ ಸ್ಥಗಿತಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರುತ್ತದೆ. ಮುದ್ರಿತ ವ್ಯವಹಾರ ದಾಖಲೆಗಳು, ಶೇಷ ಮಾಹಿತಿ ವಿವರ, ದೋಷಗಳು,

**ಡಿಜಿಟಲ್ ಚಾನಲ್‌ಗಳ ಬಳಕೆಗಾಗಿ ಅಪಾಯ, ಹೊಣೆಗಾರಿಕೆ ಮತ್ತು ಜವಾಬ್ದಾರಿ ಹಾಗೂ ಶುಲ್ಕಗಳು**

ಆಕ್ಸಿಸ್ ಬ್ಯಾಂಕ್ ತನ್ನ ಡಿಜಿಟಲ್ ಚಾನಲ್‌ಗಳನ್ನು ಪ್ರವೇಶಿಸಲು ಅಥವಾ ಬಳಸಲು ಯಾವುದೇ ಶುಲ್ಕ ಅಥವಾ ಫೀಗಳನ್ನು ವಿಧಿಸುವುದಿಲ್ಲ. ಬ್ಯಾಂಕ್ ಒದಗಿಸುವ ಯಾವುದೇ ಡಿಜಿಟಲ್ ವೇದಿಕೆಯ ಮೂಲಕ ಸೇವೆಗಳನ್ನು ಬಳಸುವ ಮೂಲಕ, ಗ್ರಾಹಕರು ಕೆಳಗಿನ ಅಪಾಯ, ಹೊಣೆಗಾರಿಕೆ ಮತ್ತು ಜವಾಬ್ದಾರಿಗಳ ಸಂಬಂಧಿತ ನಿಯಮಗಳನ್ನು ಅಂಗೀಕರಿಸುತ್ತಾರೆ ಮತ್ತು ಒಪ್ಪುತ್ತಾರೆ.

**ಗ್ರಾಹಕರ ಜವಾಬ್ದಾರಿ:**

ಗ್ರಾಹಕರು ತಮ್ಮ ಲಾಗಿನ್ ಕ್ರೆಡೆನ್ಷಿಯಲ್ಸ್, ನೋಂದಾಯಿತ ಮೊಬೈಲ್ ಸಂಖ್ಯೆ, ಸಾಧನಗಳು ಮತ್ತು ಇಂಟರ್ನೆಟ್ ಸಂಪರ್ಕದ ಗೌಪ್ಯತೆ ಮತ್ತು ಸುರಕ್ಷಿತ ಬಳಕೆಯನ್ನು ಕಾಪಾಡಿಕೊಳ್ಳಲು ಜವಾಬ್ದಾರರಾಗಿರುತ್ತಾರೆ. ಗ್ರಾಹಕರ ನಿರ್ಲಕ್ಷ್ಯ, ಅಜಾಗರೂಕತೆ ಅಥವಾ ಈ ಮಾಹಿತಿಯನ್ನು ರಕ್ಷಿಸಲು ವಿಫಲವಾದ ಕಾರಣ ಉಂಟಾಗುವ ಯಾವುದೇ ಅನಧಿಕೃತ ಪ್ರವೇಶ ಅಥವಾ ದುರುಪಯೋಗದ ಜವಾಬ್ದಾರಿ ಗ್ರಾಹಕರದ್ದೇ ಆಗಿರುತ್ತದೆ.

**ಭದ್ರತೆ ಮತ್ತು ಮೋಸದ ಅಪಾಯಗಳು:**

ಗ್ರಾಹಕರು ಬ್ಯಾಂಕ್‌ನ ಸೂಚನೆಗಳು ಅಥವಾ ಸಲಹೆಗಳನ್ನು ಉಲ್ಲಂಘಿಸಿ ತಮ್ಮ ಕ್ರೆಡೆನ್ಷಿಯಲ್ಸ್, OTP, PIN, ಪಾಸ್‌ವರ್ಡ್ ಅಥವಾ ಇತರೆ ಗೌಪ್ಯ ಮಾಹಿತಿಯನ್ನು ಹಂಚಿಕೊಳ್ಳುವುದರಿಂದ ಅಥವಾ ಬಹಿರಂಗಪಡಿಸುವುದರಿಂದ ಫಿಶಿಂಗ್, ವಿಶಿಂಗ್, ಮಾಲ್ವೇರ್ ದಾಳಿ, ಸಾಧನದ ಭದ್ರತಾ ಉಲ್ಲಂಘನೆ ಅಥವಾ ತೃತೀಯ ವ್ಯಕ್ತಿಯ ಮೋಸದ ಪರಿಣಾಮವಾಗಿ ಉಂಟಾಗುವ ನಷ್ಟಗಳಿಗೆ ಬ್ಯಾಂಕ್ ಹೊಣೆಗಾರರಾಗಿರುವುದಿಲ್ಲ.

**ಗ್ರಾಹಕರ ಹೊಣೆಗಾರಿಕೆ:**

ಗ್ರಾಹಕರು ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆ, ಸಾಧನ, ಲಾಗಿನ್ ಕ್ರೆಡೆನ್ಷಿಯಲ್ಸ್, PIN, ಪಾಸ್‌ವರ್ಡ್ ಮತ್ತು OTPಗಳ ಭದ್ರತೆಗೆ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ. ಈ ಮಾಹಿತಿಯನ್ನು ಹಂಚಿಕೊಳ್ಳುವುದರಿಂದ ಅಥವಾ ಭದ್ರತೆ ಕಳೆದುಕೊಳ್ಳುವುದರಿಂದ ಉಂಟಾಗುವ ಯಾವುದೇ ಅನಧಿಕೃತ ವ್ಯವಹಾರಗಳಿಗೆ ಸಂಪೂರ್ಣ ಹೊಣೆಗಾರಿಕೆ ಗ್ರಾಹಕರದ್ದೇ ಆಗಿರುತ್ತದೆ.

**ದೂರುಗಳು, ಅನಧಿಕೃತ ವ್ಯವಹಾರಗಳು ಮತ್ತು ಗ್ರಾಹಕರ ದೂರುಗಳು**

1. ಯಾವುದೇ ಅನಧಿಕೃತ ವ್ಯವಹಾರದ ಸಂಬಂಧದಲ್ಲಿ ಬ್ಯಾಂಕ್ ಅಥವಾ ಗ್ರಾಹಕರ ಹೊಣೆಗಾರಿಕೆ ಈ ಕೆಳಗಿನಂತಿರುತ್ತದೆ:

1. ಗ್ರಾಹಕರ ಶೂನ್ಯ ಹೊಣೆಗಾರಿಕೆ – ಕೆಳಗಿನ ಪರಿಸ್ಥಿತಿಗಳಲ್ಲಿ ಅನಧಿಕೃತ ವ್ಯವಹಾರ ಸಂಭವಿಸಿದರೆ, ಗ್ರಾಹಕರಿಗೆ ಶೂನ್ಯ ಹೊಣೆಗಾರಿಕೆಯ ಹಕ್ಕು ಉಂಟಾಗುತ್ತದೆ:
    - ಬ್ಯಾಂಕ್‌ನ ಪಾಲಿನ ಸಹಭಾಗಿತ್ವದ ಮೋಸ / ನಿರ್ಲಕ್ಷ್ಯ / ಸೇವಾ ದೋಷದಿಂದ (ಗ್ರಾಹಕರು ವ್ಯವಹಾರವನ್ನು ವರದಿ ಮಾಡಿದರೋ ಅಥವಾ ಮಾಡಲಿಲ್ಲವೋ ಎಂಬುದನ್ನು ಪರಿಗಣಿಸದೆ).
    - ಮೂರನೇ ವ್ಯಕ್ತಿಯ ಉಲ್ಲಂಘನೆಯ ಸಂದರ್ಭದಲ್ಲಿ, ದೋಷವು ಬ್ಯಾಂಕ್ ಅಥವಾ ಗ್ರಾಹಕರ ಬಳಿ ಇಲ್ಲದೆ ವ್ಯವಸ್ಥೆಯ ಇನ್ನಿತರ ಭಾಗದಲ್ಲಿ ಇರುವುದಾದರೆ ಮತ್ತು ಬ್ಯಾಂಕ್‌ನಿಂದ ಅನಧಿಕೃತ ವ್ಯವಹಾರದ ಕುರಿತು ಸಂವಹನ ಸ್ವೀಕರಿಸಿದ ದಿನಾಂಕದಿಂದ 3 ಕಾರ್ಯದಿನಗಳೊಳಗೆ ಗ್ರಾಹಕರು ಬ್ಯಾಂಕ್‌ಗೆ ಮಾಹಿತಿ ನೀಡಿದರೆ.
2. ಗ್ರಾಹಕರ ಮಿತಿಯುತ ಹೊಣೆಗಾರಿಕೆ – ಕೆಳಗಿನ ಸಂದರ್ಭಗಳಲ್ಲಿ ಅನಧಿಕೃತ ವ್ಯವಹಾರಗಳಿಂದ ಉಂಟಾಗುವ ನಷ್ಟಕ್ಕೆ ಗ್ರಾಹಕರು ಹೊಣೆಗಾರರಾಗಿರುತ್ತಾರೆ:
    - ಗ್ರಾಹಕರ ನಿರ್ಲಕ್ಷ್ಯದಿಂದ ನಷ್ಟ ಉಂಟಾದಲ್ಲಿ, ಉದಾಹರಣೆಗೆ ಪಾವತಿ ರಹಸ್ಯ ಮಾಹಿತಿಯನ್ನು ಹಂಚಿಕೊಂಡಿದ್ದರೆ, ಗ್ರಾಹಕರು ಅನಧಿಕೃತ ವ್ಯವಹಾರವನ್ನು ಬ್ಯಾಂಕ್‌ಗೆ ವರದಿ ಮಾಡುವವರೆಗೆ ಉಂಟಾಗುವ ಸಂಪೂರ್ಣ ನಷ್ಟವನ್ನು ಹೊರುತ್ತಾರೆ. ವರದಿ ಮಾಡಿದ ನಂತರ ಉಂಟಾಗುವ ಯಾವುದೇ ನಷ್ಟವನ್ನು ಬ್ಯಾಂಕ್ ಹೊರುತ್ತದೆ.
    - ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವ್ಯವಹಾರದ ಹೊಣೆಗಾರಿಕೆ ಬ್ಯಾಂಕ್ ಅಥವಾ ಗ್ರಾಹಕರ ಬಳಿ ಇಲ್ಲದೆ ವ್ಯವಸ್ಥೆಯ ಇನ್ನಿತರ ಭಾಗದಲ್ಲಿ ಇರುವುದಾದರೆ ಮತ್ತು ಬ್ಯಾಂಕ್‌ನಿಂದ ಸಂವಹನ ಸ್ವೀಕರಿಸಿದ ದಿನಾಂಕದಿಂದ 4 ರಿಂದ 7 ಕಾರ್ಯದಿನಗಳ ವಿಳಂಬದ ನಂತರ ಗ್ರಾಹಕರು ಬ್ಯಾಂಕ್‌ಗೆ ಮಾಹಿತಿ ನೀಡಿದರೆ, ಪ್ರತಿ ವ್ಯವಹಾರಕ್ಕೆ ಗ್ರಾಹಕರ ಹೊಣೆಗಾರಿಕೆ ವ್ಯವಹಾರದ ಮೌಲ್ಯ ಅಥವಾ ₹10,000/- ಇವುಗಳಲ್ಲಿ ಕಡಿಮೆ ಇರುವ ಮೊತ್ತಕ್ಕೆ ಮಿತಿಯಾಗಿರುತ್ತದೆ.
3. ಅನಧಿಕೃತ ವ್ಯವಹಾರದ ಕುರಿತು ಬ್ಯಾಂಕ್‌ನಿಂದ ಸಂವಹನ ಸ್ವೀಕರಿಸಿದ ದಿನಾಂಕದಿಂದ 7 ಕಾರ್ಯದಿನಗಳ ನಂತರ ಗ್ರಾಹಕರು ಬ್ಯಾಂಕ್‌ಗೆ ಮಾಹಿತಿ ನೀಡಿದಲ್ಲಿ, ಗ್ರಾಹಕರ ಹೊಣೆಗಾರಿಕೆಯನ್ನು ಬ್ಯಾಂಕ್‌ನ ಮಂಡಳಿಯಿಂದ ಅನುಮೋದಿತ ನೀತಿಯ ಪ್ರಕಾರ ನಿರ್ಧರಿಸಲಾಗುತ್ತದೆ. ಬ್ಯಾಂಕ್ ಅದೇ ಮಂಡಳಿ ಅನುಮೋದಿತ ನೀತಿಯ ಪ್ರಕಾರ ಮೌಲ್ಯಮಾಪನ ಮಾಡಿ ನಿರ್ಧರಿಸುತ್ತದೆ.

    ಎಸ್ಕಲೇಷನ್ ವಿವರಗಳಿಗಾಗಿ, ಆಕ್ಸಿಸ್ ಬ್ಯಾಂಕ್ ವೆಬ್‌ಸೈಟ್ (www.axis.bank.in) ಗೆ ಭೇಟಿ ನೀಡಿ ಮತ್ತು ಬ್ಯಾಂಕ್‌ನ ದೂರು ಪರಿಹಾರ ನೀತಿಯನ್ನು ನೋಡಿ: https://www.axis.bank.in/docs/default-source/default-document-library/grievance-redressal/grievance-redressal-policy.pdfನೀವು ನಮ್ಮ ಗ್ರಾಹಕ ಸೇವಾ ಸಂಖ್ಯೆಯಾದ 022-67987700 ಅನ್ನು ಸಹ ಸಂಪರ್ಕಿಸಬಹುದು.

4. ಇಲ್ಲಿ ಉಲ್ಲೇಖಿತ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಬ್ಯಾಂಕ್ ಇಲೆಕ್ಟ್ರಾನಿಕ್ ಅಥವಾ ದಾಖಲೆ ರೂಪದಲ್ಲಿ ಸಂಗ್ರಹಿಸುವ ನಿಮ್ಮ ಸೂಚನೆಗಳ ಮತ್ತು ಇತರೆ ವಿವರಗಳ (ಪಾವತಿಸಲಾದ ಅಥವಾ ಸ್ವೀಕರಿಸಲಾದ ಮೊತ್ತಗಳಿಗೆ ಮಾತ್ರ ಸೀಮಿತವಲ್ಲ) ಎಲ್ಲಾ ದಾಖಲೆಗಳು, ನಿಮ್ಮ ವಿರುದ್ಧ, ಅಂತಿಮ ಮತ್ತು ನಿರ್ಣಾಯಕ ಸಾಕ್ಷ್ಯವಾಗಿವೆ ಎಂದು ಪರಿಗಣಿಸಲಾಗುತ್ತದೆ.
5. ವರದಿ ಮಾಡಿದ ಸಮಯ ಮತ್ತು / ಅಥವಾ ಖಾತೆಯಲ್ಲಿ ನಡೆದ ವ್ಯವಹಾರ(ಗಳು)ಗೆ ಸಂಬಂಧಿಸಿದ ಯಾವುದೇ ವಿವಾದ ಅಥವಾ ಉಲ್ಲೇಖಿತ ಖಾತೆಗೆ ಸಂಬಂಧಿಸಿದ ಇತರೆ ವಿಷಯಗಳ ಬಗ್ಗೆ ವಿವಾದ ಉಂಟಾದಲ್ಲಿ, ವಿವಾದಿತ ವ್ಯವಹಾರದ ಸಮಯ ಮತ್ತು / ಅಥವಾ ಪ್ರಾಮಾಣಿಕತೆಯನ್ನು ನಿರ್ಧರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರುತ್ತದೆ. ನಿಮ್ಮ ಕಾರ್ಡ್ ಖಾತೆಯಲ್ಲಿ ಮೂರನೇ ವ್ಯಕ್ತಿಯ ಮೋಸದಿಂದ ಅಥವಾ ನಿಮ್ಮಿಂದ ಯಾವುದೇ ಸಹಭಾಗಿತ್ವದ ದೋಷವಿಲ್ಲದ ಸಂದರ್ಭಗಳಲ್ಲಿ ಸಂಭವಿಸಿದ ಅನಧಿಕೃತ ವ್ಯವಹಾರಗಳಿಗೆ ಸಂಬಂಧಿಸಿದ ಹೊಣೆಗಾರಿಕೆ, "ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಗ್ರಾಹಕರ ಮಿತಿಯುತ ಹೊಣೆಗಾರಿಕೆ – ಗ್ರಾಹಕ ರಕ್ಷಣೆ" ಕುರಿತು ಆರ್‌ಬಿಐ ವಲಯಪತ್ರದಲ್ಲಿ ನೀಡಿರುವ ಮಾರ್ಗಸೂಚಿಗಳ ಪ್ರಕಾರ ನಿರ್ಧರಿಸಲಾಗುತ್ತದೆ. ನಿಯಮಾವಳಿಗಳಲ್ಲಿ ಸಮಯಾನುಗುಣವಾಗಿ ಮಾಡಲಾಗುವ ಯಾವುದೇ ತಿದ್ದುಪಡಿ ಆ ಸಮಯದಲ್ಲಿ ಅನ್ವಯವಾಗುತ್ತದೆ ಮತ್ತು ಬಾಧ್ಯವಾಗಿರುತ್ತದೆ.
6. ಹೆಚ್ಚಿನ ಸಹಾಯಕ್ಕಾಗಿ www.axis.bank.in/support ವೆಬ್‌ಸೈಟ್ ಅನ್ನು ಸಂದರ್ಶಿಸಬೇಕು.

**ಮಾಹಿತಿಯ ಬಹಿರಂಗಪಡಿಸುವಿಕೆ**

1. ಯಾವುದೇ ಎಲೆಕ್ಟ್ರಾನಿಕ್ ನಿಧಿ ವರ್ಗಾವಣೆ ಜಾಲತಾಣದಲ್ಲಿ ತನ್ನ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅಗತ್ಯವಿರುವ ಅಥವಾ ಸೂಕ್ತವೆಂದು ಬ್ಯಾಂಕ್ ಪರಿಗಣಿಸುವ ಕಾರ್ಡ್ ಅಥವಾ ಕಾರ್ಡ್‌ಧಾರಕರ ಕುರಿತು ಮಾಹಿತಿಯನ್ನು ಇತರೆ ಸಂಸ್ಥೆಗಳಿಗೆ ಬಹಿರಂಗಪಡಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರುತ್ತದೆ.
2. ಇ-ಕಾಮರ್ಸ್ ಆನ್‌ಲೈನ್ / ಇತರೆ ಸಾಧನಗಳಲ್ಲಿ ಕಾರ್ಡ್ ಬಳಕೆಯು ಕೆಳಕಂಡ ವಿಷಯಗಳಿಗೆ ಕಾರ್ಡ್‌ಧಾರಕರ ಸ್ಪಷ್ಟ ಸಮ್ಮತಿಯಾಗಿದೆ:
    - ವ್ಯವಹಾರಗಳ ಸರಿಯಾದ ದಾಖಲೆಗಳನ್ನು ನಿರ್ವಹಿಸಲು ಅಗತ್ಯವಿರುವ ಗುರುತಿನ ವಿವರಗಳು ಮತ್ತು ಕಾರ್ಡ್ ಶೇಷ ಮಾಹಿತಿಯನ್ನು ಸಂಗ್ರಹಿಸುವುದು, ಸಂಗ್ರಹಿಸಿಡುವುದು, ಸಂವಹನ ಮಾಡುವುದು ಮತ್ತು ಸಂಸ್ಕರಿಸುವುದು.
    - ಕಾರ್ಡ್‌ಧಾರಕರ ಖಾತೆ ವಿವರಗಳು, ವ್ಯವಹಾರ ಮಾಹಿತಿ ಮತ್ತು ಕಾರ್ಡ್ ಅನ್ನು ಆನ್‌ಲೈನ್ / ಇತರೆ ಸಾಧನದಲ್ಲಿ ಬಳಸಲು ಅಗತ್ಯವಿರುವ ಇತರೆ ಮಾಹಿತಿಯನ್ನು ಭಾಗವಹಿಸುವವರು ಮತ್ತು ಪ್ರಕ್ರಿಯಾಕಾರ ಜಾಲತಾಣ / ಇತರೆ ಜಾಲತಾಣಗಳಿಗೆ ಬಿಡುಗಡೆ ಮಾಡುವುದು ಮತ್ತು ರವಾನಿಸುವುದು.

- ಮೇಲ್ಕಂಡ ಭಾಗವಹಿಸುವವರು ಮತ್ತು ಪ್ರಕ್ರಿಯಾಕಾರರು ಬ್ಯಾಂಕ್ / ಇತರೆ ಜಾಲತಾಣಗಳಲ್ಲಿ ಇಂತಹ ಮಾಹಿತಿಯನ್ನು ಮತ್ತು ದತ್ತಾಂಶವನ್ನು ಸಂಗ್ರಹಿಸಿಡುವುದು.
- ಬ್ಯಾಂಕ್ ಜಾಲತಾಣ / ಇತರೆ ಜಾಲತಾಣಗಳಲ್ಲಿ ಇರುವ ಮೇಲ್ಕಂಡ ಭಾಗವಹಿಸುವವರು ಮತ್ತು ಪ್ರಕ್ರಿಯಾಕಾರರು ಮಾಹಿತಿಯ ಬಹಿರಂಗಪಡಿಸುವಿಕೆಯನ್ನು ನಿಯಂತ್ರಿಸುವ ಕಾನೂನುಗಳು ಮತ್ತು ನಿಯಮಾವಳಿಗಳಿಗೆ ಅನುಗುಣವಾಗಿ ಪಾಲನೆ ಮಾಡುವುದು.
- ವ್ಯವಹಾರ ಪೂರ್ಣಗೊಳಿಸಲು ಅಗತ್ಯವಿರುವ ಸಂದರ್ಭಗಳಲ್ಲಿ ಅಥವಾ ಕಾನೂನು, ಸರ್ಕಾರಿ ಸಂಸ್ಥೆ, ನ್ಯಾಯಾಲಯದ ಆದೇಶಗಳು ಅಥವಾ ನ್ಯಾಯಾಂಗ ಪ್ರಕ್ರಿಯೆಗಳ ಅನುಸರಣೆಗೆ ಅಗತ್ಯವಿರುವ ಸಂದರ್ಭಗಳಲ್ಲಿ ಅಥವಾ ಕಾರ್ಡ್‌ಧಾರಕರು ಎತ್ತಿದ ದೋಷಗಳು ಅಥವಾ ಪ್ರಶ್ನೆಗಳನ್ನು ಪರಿಹರಿಸಲು ಅಥವಾ ಬ್ಯಾಂಕ್‌ನ ಆಂತರಿಕ ದತ್ತಾಂಶ ಸಂಸ್ಕರಣೆ ಅಗತ್ಯಗಳನ್ನು ಪೂರೈಸಲು ಅಗತ್ಯವಿರುವ ಸಂದರ್ಭಗಳಲ್ಲಿ ವ್ಯವಹಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮೂರನೇ ವ್ಯಕ್ತಿಗಳಿಗೆ ಬಹಿರಂಗಪಡಿಸುವುದು.

3. ಕಾರ್ಡ್‌ಧಾರಕರು ತಮ್ಮ ವೈಯಕ್ತಿಕ ವಿವರಗಳು, ಕಾರ್ಡ್ ವ್ಯವಹಾರಗಳು ಅಥವಾ ಬ್ಯಾಂಕ್‌ನೊಂದಿಗೆ ಹೊಂದಿರುವ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಯಾವುದೇ ಸಮಯದಲ್ಲಿ ಮತ್ತು ಯಾವುದೇ ಉದ್ದೇಶಕ್ಕಾಗಿ, ಬ್ಯಾಂಕ್‌ನ ಮುಖ್ಯ ಕಚೇರಿ ಅಥವಾ ಇತರೆ ಶಾಖೆಗಳು, ಉಪಕಂಪನಿಗಳು, ಸಂಬಂಧಿತ ಅಥವಾ ಅಂಗಸಂಸ್ಥೆಗಳು ಎಲ್ಲೆಡೆ ಇರುವುದಾದರೂ, ಭಾರತದಲ್ಲಿನ ಅಥವಾ ಇತರೆಡೆ ಇರುವ ಯಾವುದೇ ಸರ್ಕಾರಿ ಅಥವಾ ನಿಯಂತ್ರಣಾತ್ಮಕ ಸಂಸ್ಥೆಗಳು ಅಥವಾ ಅಧಿಕಾರಿಗಳು, ಬ್ಯಾಂಕ್‌ನ ಹಿತಕ್ಕಾಗಿ ಯಾವುದೇ ಸೇವೆ(ಗಳನ್ನು) ಒದಗಿಸಲು ಒಪ್ಪಂದ ಮಾಡಿಕೊಂಡಿರುವ ಯಾವುದೇ ಪ್ರತಿನಿಧಿಗಳು ಅಥವಾ ಗುತ್ತಿಗೆದಾರರು ಹಾಗೂ ಕಾನೂನಿನ ಪ್ರಕಾರ ಅಥವಾ ಇತರ ಕಾರಣಗಳಿಂದ ಬಹಿರಂಗಪಡಿಸುವುದು ಅಗತ್ಯವೆಂದು ಬ್ಯಾಂಕ್ ಪರಿಗಣಿಸುವ ಯಾವುದೇ ಇತರೆ ವ್ಯಕ್ತಿಗಳಿಗೆ ಬಹಿರಂಗಪಡಿಸಲು ಬ್ಯಾಂಕ್‌ಗೆ ಸ್ಪಷ್ಟವಾಗಿ ಅನುಮತಿ ನೀಡುತ್ತಾರೆ.
4. ಇಲ್ಲಿ ಉಲ್ಲೇಖಿತ ಖಾತೆಗಳ ಸಂಬಂಧಿಸಿದ ಬಾಧ್ಯತೆಗಳು ಕಾರ್ಡ್ ಹೊರತರುವ ಬ್ಯಾಂಕ್ ಶಾಖೆಯಲ್ಲಿಯೇ ಮಾತ್ರ ಪಾವತಿಸಬೇಕಾಗಿರುತ್ತವೆ ಮತ್ತು ಸ್ಥಳೀಯ ಕಾನೂನುಗಳಿಗೆ (ಇವುಗಳಲ್ಲಿ ಯಾವುದೇ ಸರ್ಕಾರಿ ಕಾನೂನು ಕ್ರಮಗಳು, ಆದೇಶಗಳು, ಡಿಕ್ರಿಗಳು ಮತ್ತು ನಿಯಮಾವಳಿಗಳು, ಹಣಕಾಸು ಮತ್ತು ವಿನಿಮಯ ನಿಯಂತ್ರಣ ನಿಯಮಾವಳಿಗಳನ್ನು ಒಳಗೊಂಡಿದ್ದರೂ ಅದಕ್ಕೆ ಮಾತ್ರ ಸೀಮಿತವಲ್ಲ) ಒಳಪಟ್ಟಿರುತ್ತವೆ.

**ಬ್ಯಾಂಕ್‌ನ ಹಕ್ಕುಗಳು**

1. ಬ್ಯಾಂಕ್ ತನ್ನ ಪೂರ್ಣ ಸ್ವೈಚ್ಛಿಕ ಅಧಿಕಾರದಿಂದ, ಯಾವುದೇ ಪೂರ್ವ ಸೂಚನೆ ನೀಡದೆ, ಕಾರ್ಡ್ ಅನ್ನು ಹಿಂಪಡೆಯಲು ಅಥವಾ ಸ್ಥಗಿತಗೊಳಿಸಲು ಅಥವಾ ಅದರ ಯಾವುದೇ ವೈಶಿಷ್ಟ್ಯಗಳನ್ನು ತಿದ್ದುಪಡಿ ಮಾಡಲು ಹಕ್ಕು ಹೊಂದಿರುತ್ತದೆ.
2. ಕಾರ್ಡ್ ಬಳಕೆ ಅನುಮೋದಿತವಲ್ಲ ಎಂದು ಅಥವಾ ವ್ಯವಹಾರ ನಿಜವಾದುದಲ್ಲ ಎಂದು ಅಥವಾ ಸ್ಪಷ್ಟವಾಗಿಲ್ಲ ಎಂದು ಅಥವಾ ಅನುಮಾನಾಸ್ಪದವಾಗಿದೆ ಎಂದು ಬ್ಯಾಂಕ್ ನಂಬಲು ಕಾರಣವಿದ್ದಲ್ಲಿ ಅಥವಾ ಯಾವುದೇ ಕಾರಣದಿಂದ ಜಾರಿಗೊಳಿಸಲಾಗದಿದ್ದಲ್ಲಿ, ವ್ಯವಹಾರವನ್ನು ಜಾರಿಗೊಳಿಸದಿರುವ ಪೂರ್ಣ ಸ್ವೈಚ್ಛಿಕ ಅಧಿಕಾರವನ್ನು ಬ್ಯಾಂಕ್ ಹೊಂದಿರುತ್ತದೆ.
3. ಕಾರ್ಡ್‌ಧಾರಕರು ನೀಡಿದ ಯಾವುದೇ ಸೂಚನೆಯನ್ನು ಬ್ಯಾಂಕ್ ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಜಾರಿಗೊಳಿಸಬಹುದಾದರೆ, ಬ್ಯಾಂಕ್ ತನ್ನ ಪೂರ್ಣ ಸ್ವೈಚ್ಛಿಕ ಅಧಿಕಾರದಿಂದ ಆ ಸೂಚನೆಯನ್ನು ಆ ವಿಧಾನಗಳಲ್ಲಿ ಯಾವುದಾದರೂ ಒಂದು ವಿಧಾನದಲ್ಲಿ ಜಾರಿಗೊಳಿಸಬಹುದು.

**ವ್ಯಾಪಾರಿಗಳೊಂದಿಗೆ ಕಾರ್ಡ್‌ಧಾರಕರ ವಿವಾದಗಳು**

1. ಕಾರ್ಡ್ ಸಂಖ್ಯೆಯನ್ನು (ಮರೆಮಾಡಿದ ರೂಪದಲ್ಲಿ) ಹೊಂದಿರುವ ಎಲೆಕ್ಟ್ರಾನಿಕ್ ಸ್ಲಿಪ್, ಕಾರ್ಡ್‌ಧಾರಕರು ಹೊಂದಿರುವ ಹೊಣೆಗಾರಿಕೆಯ ಪ್ರಮಾಣದ ಕುರಿತು ಬ್ಯಾಂಕ್ ಮತ್ತು ಕಾರ್ಡ್‌ಧಾರಕರ ನಡುವೆ ಅಂತಿಮ ಮತ್ತು ನಿರ್ಣಾಯಕ ಸಾಕ್ಷ್ಯವಾಗಿರುತ್ತದೆ.
2. ಕಾರ್ಡ್‌ಧಾರಕರು ಪಡೆದ ಯಾವುದೇ ಸರಕುಗಳು ಅಥವಾ ಸೇವೆಗಳ ಗುಣಮಟ್ಟ, ಮೌಲ್ಯ, ಭರವಸೆ, ವಿತರಣೆಯ ವಿಳಂಬ, ವಿತರಣೆ ಆಗದಿರುವುದು ಅಥವಾ ಸ್ವೀಕರಿಸದಿರುವಿಕೆ ಕುರಿತು ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಗಾರರಾಗುವುದಿಲ್ಲ.
3. ಕಾರ್ಡ್ ಸೌಲಭ್ಯವು ಕೇವಲ ಸರಕುಗಳನ್ನು ಖರೀದಿಸಲು ಅಥವಾ ಸೇವೆಗಳನ್ನು ಪಡೆಯಲು ಕಾರ್ಡ್‌ಧಾರಕರಿಗೆ ಒದಗಿಸಲಾದ ಸೌಲಭ್ಯ ಮಾತ್ರವಾಗಿದ್ದು, ಸರಕುಗಳು ಅಥವಾ ಸೇವೆಗಳ ಗುಣಮಟ್ಟ, ಮೌಲ್ಯ, ವಿತರಣೆಯ ಕುರಿತು ಅಥವಾ ಇತರ ಯಾವುದೇ ವಿಷಯಗಳ ಕುರಿತು ಬ್ಯಾಂಕ್ ಯಾವುದೇ ಭರವಸೆ ನೀಡುವುದಿಲ್ಲ ಅಥವಾ ಯಾವುದೇ ಪ್ರತಿನಿಧಿತ್ವ ಮಾಡುದಿಲ್ಲ ಎಂಬುದು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಇಂತಹ ವಿವಾದಗಳನ್ನು ನೇರವಾಗಿ ಸಂಬಂಧಿತ ವ್ಯಾಪಾರ ಸಂಸ್ಥೆಯೊಂದಿಗೆ ಪರಿಹರಿಸಬೇಕು. ಆದಾಗ್ಯೂ, ವ್ಯಾಪಾರಿಯೊಂದಿಗೆ ಉಂಟಾದ ವಿವಾದದ ಕುರಿತು, ಸ್ಥಳದ ಹೆಸರು, ವ್ಯವಹಾರದ ದಿನಾಂಕ ಮತ್ತು ಸಮಯ ಹಾಗೂ ಬ್ಯಾಂಕ್ ತನಿಖೆಗೆ ಸಹಾಯಕವಾಗುವ ಇತರೆ ವಿವರಗಳನ್ನು ಒಳಗೊಂಡಂತೆ, ಕಾರ್ಡ್‌ಧಾರಕರು ಬ್ಯಾಂಕ್‌ಗೆ ತಿಳಿಸಬೇಕು.
4. ಅನ್ವಯಿಸುವ ಶುಲ್ಕದ ಕುರಿತು ಖಾತೆ ವಿವರದಲ್ಲಿ ಸೂಚಿಸಲಾದ ಮೊತ್ತದ ವಿರುದ್ಧ ಕಾರ್ಡ್‌ಧಾರಕರು ನೀಡಿದ ಆಕ್ಷೇಪಣೆ ಕುರಿತು ಬ್ಯಾಂಕ್‌ಗೆ ಮಾಹಿತಿ ಬಂದ ದಿನಾಂಕದಿಂದ ಎರಡು ತಿಂಗಳ ಒಳಗೆ, ಬ್ಯಾಂಕ್

ಸದ್ಭಾವನೆಯಿಂದ ಮತ್ತು ಯುಕ್ತವಾದ ಪ್ರಯತ್ನಗಳನ್ನು ಮಾಡಿ ವಿವಾದವನ್ನು ಪರಿಹರಿಸಲು ಪ್ರಯತ್ನಿಸುತ್ತದೆ. ಅಂತಹ ಪ್ರಯತ್ನಗಳ ನಂತರ ಸೂಚಿಸಲಾದ ಶುಲ್ಕ ಸರಿಯಾಗಿದೆ ಎಂದು ಬ್ಯಾಂಕ್ ನಿರ್ಧರಿಸಿದಲ್ಲಿ, ಮಾರಾಟ ಸ್ಲಿಪ್ ಅಥವಾ ಪಾವತಿ ವಿನಂತಿಯ ಪ್ರತಿಯನ್ನು ಒಳಗೊಂಡ ವಿವರಗಳೊಂದಿಗೆ ಅದನ್ನು ಕಾರ್ಡ್‌ಧಾರಕರಿಗೆ ತಿಳಿಸುತ್ತದೆ.

5. ಯಾವುದೇ ಸಂಸ್ಥೆ ಕಾರ್ಡ್ ಅನ್ನು ಮಾನ್ಯಗೊಳಿಸಲು ನಿರಾಕರಿಸಿದಲ್ಲಿ, ಬ್ಯಾಂಕ್ ಯಾವುದೇ ಹೊಣೆಗಾರಿಕೆಯನ್ನು ಸ್ವೀಕರಿಸುವುದಿಲ್ಲ.
6. ಕೆಲವು ವ್ಯಾಪಾರಿಗಳೊಂದಿಗೆ ಸರಕುಗಳು ಖರೀದಿಸುವುದು / ಸೇವೆಗಳು ಪಡೆಯುವ ಸಂದರ್ಭದಲ್ಲಿ ಕಾರ್ಡ್‌ಧಾರಕರಿಗೆ ರಿಯಾಯಿತಿ ನೀಡುವ ವ್ಯವಸ್ಥೆಯನ್ನು ಬ್ಯಾಂಕ್ ಮಾಡಿಕೊಂಡಿದೆ. ಆದಾಗ್ಯೂ, ಇಂತಹ ವ್ಯಾಪಾರಿಗಳೊಂದಿಗೆ ಕಾರ್ಡ್‌ಧಾರಕರಿಗೆ ಉಂಟಾಗುವ ಯಾವುದೇ ವಿವಾದಗಳಿಗೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಗಾರರಾಗುವುದಿಲ್ಲ.

**ಹೊಣೆಗಾರಿಕೆಯಿಂದ ಹೊರತಾಗುವಿಕೆ**

1. ಮೇಲ್ಕಂಡ ವಿಧಿಗಳಿಗೆ ಯಾವುದೇ ಹಾನಿ ಉಂಟಾಗದಂತೆ, ಕೆಳಗಿನ ಸಂದರ್ಭಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿ, ಬ್ಯಾಂಕ್ ಕಾರ್ಡ್‌ಧಾರಕರಿಗೆ ಯಾವುದೇ ರೀತಿಯ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ:
   - ಒದಗಿಸಲಾದ ಸರಕುಗಳು ಅಥವಾ ಸೇವೆಗಳಲ್ಲಿರುವ ಯಾವುದೇ ದೋಷ.
   - ಯಾವುದೇ ವ್ಯಕ್ತಿ ಕಾರ್ಡ್ ಅನ್ನು ಮಾನ್ಯಗೊಳಿಸಲು ಅಥವಾ ಸ್ವೀಕರಿಸಲು ನಿರಾಕರಿಸುವುದು.
   - ವರ್ಚುವಲ್ ಕಾರ್ಡ್ ಅನ್ನು ಹಿಂತಿರುಗಿಸಲು ಯಾವುದೇ ವ್ಯಕ್ತಿ ಮಾಡಿದ ಯಾವುದೇ ಹೇಳಿಕೆ ಅಥವಾ ಅದಕ್ಕೆ ಸಂಬಂಧಿಸಿ ಯಾವುದೇ ವ್ಯಕ್ತಿ ಕೈಗೊಂಡ ಯಾವುದೇ ಕ್ರಮ.
   - ಕಾರ್ಡ್ ಮೇಲ್ಮೈಯಲ್ಲಿ ಸೂಚಿಸಲಾದ ಅವಧಿ ಮುಕ್ತಾಯದ ದಿನಾಂಕಕ್ಕೂ ಮುನ್ನ ಕಾರ್ಡ್ ಹಸ್ತಾಂತರಿಸಲು ಬ್ಯಾಂಕ್ ತನ್ನ ಹಕ್ಕನ್ನು ಬಳಸುವುದು, ಮತ್ತು ಅಂತಹ ಬೇಡಿಕೆ ಮತ್ತು ಹಸ್ತಾಂತರವನ್ನು ಬ್ಯಾಂಕ್ ಅಥವಾ ಯಾವುದೇ ವ್ಯಕ್ತಿ ಅಥವಾ ಕಂಪ್ಯೂಟರ್ ಟರ್ಮಿನಲ್ ಮೂಲಕ ಮಾಡಲ್ಪಟ್ಟಿದ್ದರೂ.
   - ಯಾವುದೇ ಕಾರ್ಡ್ ಅನ್ನು ರದ್ದುಪಡಿಸುವ ಬ್ಯಾಂಕ್‌ನ ಹಕ್ಕಿನ ಬಳಕೆ.
   - ಕಾರ್ಡ್ ವಶಪಡಿಸಿಕೊಳ್ಳುವಿಕೆ ಮತ್ತು / ಅಥವಾ ಅದರ ಹಿಂತಿರುಗಿಸುವ ಬೇಡಿಕೆ ಅಥವಾ ಯಾವುದೇ ವ್ಯಾಪಾರ ಸಂಸ್ಥೆ ಕಾರ್ಡ್ ಅನ್ನು ಮಾನ್ಯಗೊಳಿಸಲು ಅಥವಾ ಸ್ವೀಕರಿಸಲು ನಿರಾಕರಿಸಿರುವುದರಿಂದ

ಉಂಟಾಗಿದೆ ಎಂದು ಹೇಳಲಾಗುವ ಅರ್ಜಿದಾರರ ಸಾಲ ಸಾಮರ್ಥ್ಯ ಮತ್ತು ಖ್ಯಾತಿಗೆ ಉಂಟಾದ ಯಾವುದೇ ಹಾನಿ.

- ಬ್ಯಾಂಕ್‌ಗೆ ಬಹಿರಂಗಪಡಿಸಲಾದ ಯಾವುದೇ ವಿವರಗಳಲ್ಲಿ ಇರುವ ತಪ್ಪು ಹೇಳಿಕೆ, ತಪ್ಪು ಪ್ರತಿನಿಧಿತ್ವ, ದೋಷ ಅಥವಾ ಲೋಪ.
- ವ್ಯಾಪಾರಿ ಸ್ಥಳದಲ್ಲಿ ಯಾವುದೇ ಕಾರಣದಿಂದ ವ್ಯವಹಾರ ನಿರಾಕರಿಸಲ್ಪಡುವುದು.

2. ವ್ಯವಸ್ಥೆ ಅಥವಾ ಸಾಧನಗಳ ದೋಷದಿಂದ ಅಥವಾ ಬ್ಯಾಂಕ್ ಮೂರನೇ ವ್ಯಕ್ತಿಗಳ ಉತ್ಪನ್ನಗಳ ಮೇಲೆ ಅಥವಾ ಪರಸ್ಪರ ಅವಲಂಬಿತ ಸೇವೆಗಳ ಮೇಲೆ (ಇವುಗಳಲ್ಲಿ ವಿದ್ಯುತ್ ಅಥವಾ ದೂರಸಂಪರ್ಕ ಸೇವೆಗಳು ಒಳಗೊಂಡಿದ್ದರೂ ಅದಕ್ಕೆ ಮಾತ್ರ ಸೀಮಿತವಲ್ಲ) ಅವಲಂಬಿತವಾಗಿರುವುದರಿಂದ ಉಂಟಾಗುವ ಯಾವುದೇ ಸೇವಾ ವೈಫಲ್ಯಗಳು ಅಥವಾ ವ್ಯತ್ಯಯಗಳು (ದತ್ತಾಂಶ ನಷ್ಟವನ್ನು ಒಳಗೊಂಡಿದ್ದರೂ ಅದಕ್ಕೆ ಮಾತ್ರ ಸೀಮಿತವಲ್ಲ) ಕಾರಣವಾಗಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಬ್ಯಾಂಕ್ ಯಾವುದೇ ಹೊಣೆಗಾರಿಕೆಯನ್ನು ಸ್ವೀಕರಿಸುವುದಿಲ್ಲ.
3. ದೇವರ ಕೃತ್ಯಗಳು, ಗಲಭೆಗಳು, ನಾಗರಿಕ ಅಶಾಂತಿ, ದಂಗೆಗಳು, ಯುದ್ಧಗಳು ಅಥವಾ ಬ್ಯಾಂಕ್‌ನ ನಿಯಂತ್ರಣದಾಚೆಯ ಇತರ ಯಾವುದೇ ಕಾರಣಗಳಿಂದ ಅಥವಾ ಮುಷ್ಕರಗಳು ಅಥವಾ ಲಾಕ್‌ಔಟ್‌ಗಳಿಂದ ಬ್ಯಾಂಕ್ ವ್ಯವಹಾರದಲ್ಲಿ ಉಂಟಾಗುವ ವ್ಯತ್ಯಯದಿಂದ ಉಂಟಾಗುವ ಪರಿಣಾಮಗಳಿಗೆ ಬ್ಯಾಂಕ್ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.
4. ಆನ್‌ಲೈನ್ ಪೋರ್ಟಲ್ ದೋಷದಿಂದ ಕಾರ್ಯನಿರ್ವಹಿಸದಿದ್ದಲ್ಲಿ, ಅದರ ಪರಿಣಾಮವಾಗಿ ಕಾರ್ಡ್‌ಧಾರಕರಿಗೆ ವ್ಯವಹಾರದ ಮೊತ್ತದ ಭಾಗಶಃ ಅಥವಾ ಸಂಪೂರ್ಣ ನಷ್ಟ ಉಂಟಾದಲ್ಲಿ, ಮತ್ತು ಬ್ಯಾಂಕ್ ತನ್ನ ದಾಖಲೆಗಳನ್ನು ಪರಿಶೀಲಿಸಿ ಅಂತಹ ನಷ್ಟವನ್ನು ದೃಢಪಡಿಸಿದಲ್ಲಿ, ಸೇವಾ ಶುಲ್ಕಗಳ ಸರಿಪಡಿಸುವಿಕೆಯನ್ನು ಒಳಗೊಂಡಂತೆ ಅಗತ್ಯವಿರುವ ತಿದ್ದುಪಡಿಗಳನ್ನು ಕಾರ್ಡ್‌ನಲ್ಲಿ ಮಾಡಿ, ಬ್ಯಾಂಕ್ ಆ ನಷ್ಟವನ್ನು ಸರಿಪಡಿಸುತ್ತದೆ.
5. ಕಾರ್ಡ್‌ಧಾರಕರ ಸೂಚನೆಗಳನ್ನು ಅನುಸರಿಸಲು ವಿಫಲವಾದ ಕಾರಣದಿಂದ ಕಾರ್ಡ್‌ಧಾರಕರಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ, ಆ ವಿಫಲತೆ ಬ್ಯಾಂಕ್‌ನ ನಿಯಂತ್ರಣದಾಚೆಯ ಕಾರಣಗಳಿಂದ ಉಂಟಾದಲ್ಲಿ, ಬ್ಯಾಂಕ್ ಹೊಣೆಗಾರರಾಗುವುದಿಲ್ಲ. ಈ ವಿಷಯದಲ್ಲಿ ಬ್ಯಾಂಕ್‌ನ ಅಭಿಪ್ರಾಯ ಅಂತಿಮವಾಗಿರುತ್ತದೆ.
6. ಕಾರ್ಡ್ ಸೌಲಭ್ಯವನ್ನು ಪಡೆಯುವ ಮೂಲಕ, ಕಾರ್ಡ್ ಬಳಸಿ ನಡೆಸಲಾಗುವ ವ್ಯವಹಾರಗಳನ್ನು ಜಾರಿಗೊಳಿಸಲು ಕಾರ್ಡ್‌ಧಾರಕರು ಬ್ಯಾಂಕ್‌ಗೆ ಸ್ಪಷ್ಟವಾದ ಅಧಿಕಾರವನ್ನು ನೀಡುತ್ತಾರೆ. ಪಿನ್ ಮೂಲಕ

ದೃಢೀಕರಿಸುವುದನ್ನು ಹೊರತುಪಡಿಸಿ, ನಡೆಸಲಾದ ಯಾವುದೇ ವ್ಯವಹಾರದ ಪ್ರಾಮಾಣಿಕತೆಯನ್ನು ಪರಿಶೀಲಿಸುವ ಬಾಧ್ಯತೆ ಬ್ಯಾಂಕ್‌ಗೆ ಇರುವುದಿಲ್ಲ.

7. ಯಾವುದೇ ಸಂದರ್ಭದಲ್ಲಿಯೂ ನೇರ ಅಥವಾ ಪರೋಕ್ಷ, ಅನೈಕ್ಯ ಅಥವಾ ಪರಿಣಾಮಕಾರಿ ನಷ್ಟ ಅಥವಾ ಹಾನಿಗಳಿಗೆ ಸಂಬಂಧಿಸಿದ ಯಾವುದೇ ದಾವೆಗಳಿಗೆ ಬ್ಯಾಂಕ್ ಹೊಣೆಗಾರರಾಗುವುದಿಲ್ಲ, ಮತ್ತು ಆ ದಾವೆಗಳು ಆದಾಯ ನಷ್ಟ, ಹೂಡಿಕೆ ನಷ್ಟ, ಉತ್ಪಾದನೆ ನಷ್ಟ, ಸೌಹಾರ್ದ ನಷ್ಟ, ಲಾಭ ನಷ್ಟ, ವ್ಯವಹಾರ ವ್ಯತ್ಯಯ ಅಥವಾ ಯಾವುದೇ ಸ್ವರೂಪದ ಇತರ ನಷ್ಟಗಳ ಆಧಾರದ ಮೇಲೆ ಆಗಿದ್ದರೂ ಅಥವಾ ಕಾರ್ಡ್‌ಧಾರಕರು ಅಥವಾ ಇತರ ಯಾವುದೇ ವ್ಯಕ್ತಿಗೆ ಉಂಟಾಗಿದ್ದರೂ ಸಹ ಬ್ಯಾಂಕ್ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.
8. ವಿನಿಮಯ ಸಾಮರ್ಥ್ಯ ಅಥವಾ ವರ್ಗಾಯಿಸುವಿಕೆಯ ಮೇಲಿನ ನಿರ್ಬಂಧಗಳು, ವಶಪಡಿಸಿಕೊಳ್ಳುವ ಆದೇಶಗಳು, ಬಲವಂತ ವರ್ಗಾವಣೆಗಳು, ಯುದ್ಧ ಅಥವಾ ನಾಗರಿಕ ಅಶಾಂತಿ ಕೃತ್ಯಗಳು ಅಥವಾ ಬ್ಯಾಂಕ್‌ನ ನಿಯಂತ್ರಣದಾಚೆಯ ಇತರ ಸಮಾನ ಕಾರಣಗಳಿಂದ ಕಾರ್ಡ್‌ಗೆ ಜಮಾ ಮಾಡಲಾದ ನಿಧಿಗಳ ಲಭ್ಯತೆ ಇಲ್ಲದಿರುವುದಕ್ಕೆ ಬ್ಯಾಂಕ್ ಹೊಣೆಗಾರರಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಬ್ಯಾಂಕ್‌ನ ಯಾವುದೇ ಇತರೆ ಶಾಖೆ, ಉಪಕಂಪನಿ ಅಥವಾ ಸಂಬಂಧಿತ ಸಂಸ್ಥೆ ಕೂಡ ಹೊಣೆಗಾರರಾಗುವುದಿಲ್ಲ.

**ಪಾವತಿಯನ್ನು ನಿರಾಕರಿಸುವ ಅಧಿಕಾರ**

1. ಅನ್ವಯಿಸುವ ಕಾನೂನುಗಳು ಬೇರೆ ರೀತಿಯಾಗಿ ನಿರ್ಧರಿಸದ ಹೊರತು, ಕಾರ್ಡ್‌ನಲ್ಲಿ ವ್ಯವಹಾರ ನಡೆಸುವ ಕಾರ್ಡ್‌ಧಾರಕರ ಸಾಮರ್ಥ್ಯವನ್ನು ಪ್ರಶ್ನಿಸುವ ಯಾವುದೇ ಪ್ರಕ್ರಿಯೆ, ಸಮನ್ಸ್, ಆದೇಶ, ನಿರ್ಬಂಧಾಜ್ಞೆ, ಜಾರಿಗೆ ಆದೇಶ, ಜಪ್ತಿ, ವಸೂಲಿ, ಹಕ್ಕುಬಂಧ, ಮಾಹಿತಿ ಅಥವಾ ನೋಟಿಸ್ ಬ್ಯಾಂಕ್‌ಗೆ ಬಂದಲ್ಲಿ, ಮತ್ತು ಬ್ಯಾಂಕ್ ಸದ್ಭಾವನೆಯಿಂದ ಅದನ್ನು ಅಂತಹ ಪ್ರಶ್ನೆಯಾಗಿ ಪರಿಗಣಿಸಿದಲ್ಲಿ, ಬ್ಯಾಂಕ್ ತನ್ನ ಪೂರ್ಣ ಸ್ವೈಚ್ಛಿಕ ಅಧಿಕಾರದಿಂದ ಮತ್ತು ಕಾರ್ಡ್‌ಧಾರಕರಿಗೆ ಯಾವುದೇ ಹೊಣೆಗಾರಿಕೆಯಾಗದೆ, ಕಾರ್ಡ್‌ಧಾರಕರ ನಿಧಿಗಳ ಯಾವುದೇ ಭಾಗವನ್ನು ಸಂಬಂಧಿತ ಪ್ರಾಧಿಕಾರಕ್ಕೆ ಪಾವತಿಸಬಹುದು ಮತ್ತು ಅನ್ವಯಿಸುವ ಕಾನೂನುಗಳ ಪ್ರಕಾರ ಅಗತ್ಯವಿರುವ ಇತರೆ ಕ್ರಮಗಳನ್ನು ಕೈಗೊಳ್ಳಬಹುದು.
2. ಕಾರ್ಡ್‌ಗೆ ಸಂಬಂಧಿಸಿದ ಕಾನೂನು ಕ್ರಮಗಳಿಂದ ಬ್ಯಾಂಕ್‌ಗೆ ಉಂಟಾಗುವ ಯುಕ್ತವಾದ ಸೇವಾ ಶುಲ್ಕ ಮತ್ತು ಯಾವುದೇ ವೆಚ್ಚಗಳನ್ನು (ಕಾನೂನು ಅನುಮತಿಸಿದ ಮಟ್ಟಿಗೆ ಯುಕ್ತವಾದ ಕಾನೂನು ಶುಲ್ಕಗಳನ್ನು ಒಳಗೊಂಡಂತೆ, ಆದರೆ ಇದಕ್ಕೆ ಮಾತ್ರ ಸೀಮಿತವಲ್ಲ) ಕಾರ್ಡ್‌ನ ಲಭ್ಯವಿರುವ ಮೊತ್ತದಿಂದ ಕಡಿತಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರುತ್ತದೆ.

**ಕಾರ್ಡ್ ರದ್ದುಪಡಿಸುವುದು**

1. ಕಾರ್ಡ್ ಬಳಕೆಯನ್ನು ರದ್ದುಪಡಿಸಲು ಕಾರ್ಡ್‌ಧಾರಕರು ನಿರ್ಧರಿಸಿದಲ್ಲಿ, ಕಾರ್ಡ್‌ಧಾರಕರು ಪೋರ್ಟಲ್ ಮೂಲಕ ಕಾರ್ಡ್ ಅನ್ನು ಮುಚ್ಚಬಹುದು. ಗ್ರಾಹಕರು ಬೆಂಬಲ ತಂಡಕ್ಕೆ ಲಿಖಿತವಾಗಿ ತಿಳಿಸಬಹುದು ಅಥವಾ ಶಾಖೆಯನ್ನು ಸಂಪರ್ಕಿಸಬಹುದು.
2. ಬ್ಯಾಂಕ್ ಯಾವುದೇ ಕಾರಣವನ್ನು ತಿಳಿಸದೆ ಅಥವಾ ಕಾರಣವನ್ನು ತಿಳಿಸಿ, 7 ದಿನಗಳ ಮುಂಚಿತ ನೋಟಿಸ್ ನೀಡುವ ಮೂಲಕ ಕಾರ್ಡ್ ಅನ್ನು ರದ್ದುಗೊಳಿಸಿ ಈ ಸೌಲಭ್ಯವನ್ನು ಯಾವುದೇ ಸಮಯದಲ್ಲಿ ಸ್ಥಗಿತಗೊಳಿಸುವ ಹಕ್ಕು ಹೊಂದಿರುತ್ತದೆ. ಇಂತಹ ನೋಟಿಸ್ ಅನ್ನು ಭಾರತದಲ್ಲಿರುವ ಕಾರ್ಡ್‌ಧಾರಕರಿಂದ ಬ್ಯಾಂಕ್‌ಗೆ ಕೊನೆಯದಾಗಿ ಲಿಖಿತವಾಗಿ ತಿಳಿಸಲಾದ ವಿಳಾಸಕ್ಕೆ ಕಳುಹಿಸಿದ ದಿನಾಂಕದಿಂದ 7 ದಿನಗಳ ನಂತರ ಕಾರ್ಡ್‌ಧಾರಕರು ಸ್ವೀಕರಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

**ಪರಿಹಾರ ಮತ್ತು ಹೊಣೆಗಾರಿಕೆ ವಿಮುಕ್ತಿ**

1. ಕಾರ್ಡ್ ಸೌಲಭ್ಯವನ್ನು ಕಾರ್ಡ್‌ಧಾರಕರು ಅಥವಾ ಅವರ ಪ್ರತಿನಿಧಿಗಳು, ನೌಕರರು ಮತ್ತು ಸಹಚರರು ಬಳಸಿದ ಪರಿಣಾಮವಾಗಿ ಬ್ಯಾಂಕ್, ಅದರ ಗ್ರಾಹಕರು ಅಥವಾ ಯಾವುದೇ ಮೂರನೇ ವ್ಯಕ್ತಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ಮೂರನೇ ವ್ಯಕ್ತಿಯಿಂದ ತರಲಾದ ಯಾವುದೇ ದಾವೆ ಅಥವಾ ಕ್ರಮಗಳಿಗೆ ಸಂಬಂಧಿಸಿ, ಕಾರ್ಡ್‌ಧಾರಕರು ಬ್ಯಾಂಕ್‌ಗೆ ಪೂರ್ಣವಾಗಿ ಪರಿಹಾರ ನೀಡಿ, ಬ್ಯಾಂಕನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಬೇಕು. ಕೆಳಗಿನ ಕಾರಣಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಬ್ಯಾಂಕ್‌ಗೆ ಉಂಟಾಗುವ ಎಲ್ಲಾ ಹೊಣೆಗಾರಿಕೆಗಳು, ನಷ್ಟಗಳು, ಹಾನಿಗಳು ಮತ್ತು ವೆಚ್ಚಗಳಿಗೆ ಕಾರ್ಡ್‌ಧಾರಕರು ಬ್ಯಾಂಕ್‌ಗೆ ಪರಿಹಾರ ನೀಡಲು ಒಪ್ಪುತ್ತಾರೆ:
   - ಕಾರ್ಡ್‌ಧಾರಕರ ನಿರ್ಲಕ್ಷ್ಯ / ತಪ್ಪು ಅಥವಾ ದುರುದ್ದೇಶಪೂರ್ಣ ವರ್ತನೆ
   - ಕಾರ್ಡ್‌ಗೆ ಸಂಬಂಧಿಸಿದ ನಿಯಮಗಳು / ಷರತ್ತುಗಳ ಉಲ್ಲಂಘನೆ ಅಥವಾ ಪಾಲನೆ ಮಾಡದಿರುವುದು
   - ಕಾರ್ಡ್‌ಧಾರಕರು ಅಥವಾ ಅವರ ನೌಕರರು / ಪ್ರತಿನಿಧಿಗಳಿಂದ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದ ಮೋಸ ಅಥವಾ ಅಪ್ರಾಮಾಣಿಕತೆ
   - ಆನ್‌ಲೈನ್ ವ್ಯಾಪಾರಿ, ಇಡಿಸಿ ಮತ್ತು ಇತರ ಸಮಾನ ಎಲೆಕ್ಟ್ರಾನಿಕ್ ಟರ್ಮಿನಲ್‌ಗಳು ಯಂತ್ರಗಳಾಗಿದ್ದು, ಕಾರ್ಯಾಚರಣೆಯ ವೇಳೆ ದೋಷಗಳು ಸಂಭವಿಸಬಹುದಾಗಿದೆ
2. ಇಂತಹ ಯಾವುದೇ ವೈಫಲ್ಯಗಳಿಗೆ ಕಾರ್ಡ್‌ಧಾರಕರು ಬ್ಯಾಂಕ್‌ಗೆ ಪೂರ್ಣವಾಗಿ ಪರಿಹಾರ ನೀಡಿ, ಬ್ಯಾಂಕನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಲು ಒಪ್ಪುತ್ತಾರೆ. ಬ್ಯಾಂಕ್‌ನ ನಿಯಂತ್ರಣದಾಚೆಯ

ಯಾವುದೇ ಕಾರಣಗಳಿಂದ ಸೌಲಭ್ಯ ಒದಗಿಸಲು ವಿಫಲವಾದರೆ ಅಥವಾ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲವಾದರೆ, ಬ್ಯಾಂಕ್ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ. ಬ್ಯಾಂಕ್ ಕಾರ್ಡ್ ಸೌಲಭ್ಯವನ್ನು ಒದಗಿಸಿರುವ ಪ್ರತಿಫಲವಾಗಿ, ಕಾರ್ಡ್‌ಧಾರಕರು ಕಾರ್ಡ್ ಸೌಲಭ್ಯ ಒದಗಿಸುವ ಪರಿಣಾಮವಾಗಿ ಅಥವಾ ಕಾರ್ಡ್‌ಧಾರಕರ ಸೂಚನೆಗಳ ಆಧಾರದ ಮೇಲೆ ಸದ್ಭಾವನೆಯಿಂದ ಕ್ರಮ ಕೈಗೊಳ್ಳುವಾಗ ಅಥವಾ ಕ್ರಮ ಕೈಗೊಳ್ಳಲು ನಿರಾಕರಿಸುವಾಗ ಅಥವಾ ಕ್ರಮ ಕೈಗೊಳ್ಳುವುದನ್ನು ಬಿಟ್ಟುಕೊಡುವಾಗ ಬ್ಯಾಂಕ್‌ಗೆ ಯಾವಾಗಲಾದರೂ ಉಂಟಾಗುವ ಎಲ್ಲಾ ಕ್ರಮಗಳು, ದಾವೆಗಳು, ಬೇಡಿಕೆಗಳು, ಪ್ರಕ್ರಿಯೆಗಳು, ನಷ್ಟಗಳು, ಹಾನಿಗಳು, ವೈಯಕ್ತಿಕ ಗಾಯಗಳು, ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳ ವಿರುದ್ಧ ಬ್ಯಾಂಕ್‌ಗೆ ಪೂರ್ಣವಾಗಿ ಪರಿಹಾರ ನೀಡಿ, ಬ್ಯಾಂಕನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಲು ಒಪ್ಪುತ್ತಾರೆ. ಕಾರ್ಡ್ ಕಳೆದುಹೋಗಿ ಬ್ಯಾಂಕ್‌ಗೆ ಸಮಯಕ್ಕೆ ಸರಿಯಾಗಿ ವರದಿ ಮಾಡದಿದ್ದಲ್ಲಿ ಅಥವಾ ಬ್ಯಾಂಕ್‌ಗೆ ತಿಳಿಸುವ ಮೊದಲು ಕಳೆದುಹೋಗಿ ದುರುಪಯೋಗವಾದಲ್ಲಿ, ಅದರಿಂದ ಉಂಟಾಗುವ ಯಾವುದೇ ಹೊಣೆಗಾರಿಕೆ (ನಾಗರಿಕ ಅಥವಾ ಫೌಜ್ದಾರಿ), ನಷ್ಟ, ವೆಚ್ಚ ಅಥವಾ ಹಾನಿಗಳಿಗೆ ಕಾರ್ಡ್‌ಧಾರಕರು ಬ್ಯಾಂಕ್‌ಗೆ ಪೂರ್ಣವಾಗಿ ಪರಿಹಾರ ನೀಡಿ, ಬ್ಯಾಂಕನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಬೇಕು.

**ವಿವಿಧ**

1. ಕಾರ್ಡ್ ಅರ್ಜಿ ನಮೂನೆಗೆ ಸಹಿ ಮಾಡುವ ಮೂಲಕ ಅಥವಾ ಕಾರ್ಡ್ ಸ್ವೀಕೃತಿಯನ್ನು ಲಿಖಿತವಾಗಿ ದೃಢೀಕರಿಸುವ ಮೂಲಕ, ಕಾರ್ಡ್‌ಧಾರಕರು ಈ ನಿಯಮಗಳು ಮತ್ತು ಷರತ್ತುಗಳಿಗೆ ಯಾವುದೇ ಷರತ್ತಿಲ್ಲದೆ ಒಪ್ಪಿಕೊಂಡಿದ್ದಾರೆ ಮತ್ತು ಸ್ವೀಕರಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ.
2. ಕಾರ್ಡ್ ಮೇಲೆ ಒದಗಿಸಲಾದ ನೀತಿಗಳು, ವೈಶಿಷ್ಟ್ಯಗಳು ಮತ್ತು ಲಾಭಗಳನ್ನು ಸಮಯಾನುಗುಣವಾಗಿ ಪರಿಷ್ಕರಿಸಲು ಹಾಗೂ ಈ ನಿಯಮಗಳು ಮತ್ತು ಷರತ್ತುಗಳನ್ನು ತಿದ್ದುಪಡಿ ಮಾಡಲು ಬ್ಯಾಂಕ್ ಹಕ್ಕನ್ನು ಕಾಯ್ದಿರುತ್ತದೆ. ಪರಿಷ್ಕೃತ ನಿಯಮಗಳು ಮತ್ತು ಷರತ್ತುಗಳನ್ನು ಅಕ್ಷಿಸ್ ಬ್ಯಾಂಕ್ ವೆಬ್‌ಸೈಟ್ www.axis.bank.in ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ. ಯಾವುದೇ ತಿದ್ದುಪಡಿ ಜಾರಿಗೆ ಬರುವ ದಿನಾಂಕಕ್ಕೂ ಮುನ್ನ ವರ್ಚುವಲ್ ಗಿಫ್ಟ್ ಕಾರ್ಡ್ ಅನ್ನು ರದ್ದುಪಡಿಸಲು ಬ್ಯಾಂಕ್‌ಗೆ ಹಿಂತಿರುಗಿಸದಿದ್ದರೆ, ಕಾರ್ಡ್‌ಧಾರಕರು ಅಂತಹ ತಿದ್ದುಪಡಿಗಳಿಗೆ ಬದ್ಧರಾಗಿರುತ್ತಾರೆ.
3. ಈ ನಿಯಮಗಳು ಕಾರ್ಡ್‌ಧಾರಕರು ಮತ್ತು ಬ್ಯಾಂಕ್ ನಡುವೆ ಒಪ್ಪಂದವನ್ನು ರೂಪಿಸುತ್ತವೆ. ಸೌಲಭ್ಯವನ್ನು ಸ್ವೀಕರಿಸುವ ಮೂಲಕ, ಕಾರ್ಡ್‌ಧಾರಕರು ಈ ನಿಯಮಗಳು ಮತ್ತು ಷರತ್ತುಗಳನ್ನು ಸ್ವೀಕರಿಸುತ್ತಾರೆ.

4. ಕೆಳಗೆ ಉಲ್ಲೇಖಿಸಲಾದ ಉದ್ದೇಶಗಳು / ಕಾರಣಗಳನ್ನು ಒಳಗೊಂಡಂತೆ (ಆದರೆ ಅವಕ್ಕೆ ಮಾತ್ರ ಸೀಮಿತವಾಗಿಲ್ಲ), ಬ್ಯಾಂಕ್ ಬದಲಾವಣೆಗಳನ್ನು ಮಾಡಬಹುದು:
    - ವರ್ಚುವಲ್ ಗಿಫ್ಟ್ ಕಾರ್ಡ್ ಬಳಕೆಗೆ ಸಂಬಂಧಿಸಿದ ಶುಲ್ಕಗಳನ್ನು ವಿಧಿಸುವುದು ಅಥವಾ ಹೆಚ್ಚಿಸುವುದು
    - ಕಾರ್ಡ್‌ಧಾರಕರ ಕಾರ್ಡ್ ಮೂಲಕ ನಡೆದ ವ್ಯವಹಾರಗಳಿಗೆ ಸಂಬಂಧಿಸಿದ ನಷ್ಟಗಳ ಕುರಿತು ಕಾರ್ಡ್‌ಧಾರಕರ ಹೊಣೆಗಾರಿಕೆಯನ್ನು ಹೆಚ್ಚಿಸುವುದು
5. ಕಾರ್ಡ್ ವ್ಯವಹಾರಗಳಿಗೆ ಬಳಸುವ ಎಲೆಕ್ಟ್ರಾನಿಕ್ ವ್ಯವಸ್ಥೆ ಅಥವಾ ಸಾಧನಗಳ ಭದ್ರತೆಯನ್ನು ಕಾಪಾಡಲು ಅಥವಾ ಮರುಸ್ಥಾಪಿಸಲು ಅಗತ್ಯವಿರುವ ಸಂದರ್ಭದಲ್ಲಿ, ಬ್ಯಾಂಕ್ ಯಾವುದೇ ಪೂರ್ವ ಸೂಚನೆ ನೀಡದೆ ಬದಲಾವಣೆಗಳನ್ನು ಮಾಡಬಹುದು. ಇಂತಹ ಬದಲಾವಣೆ ಮಾಡಲಾದಲ್ಲಿ, ಎಲೆಕ್ಟ್ರಾನಿಕ್ ವ್ಯವಸ್ಥೆ ಅಥವಾ ಸಾಧನಗಳ ಭದ್ರತೆಯನ್ನು ಅಪಾಯಕ್ಕೆ ಒಳಪಡಿಸುವ ಪರಿಸ್ಥಿತಿ ಹೊರತುಪಡಿಸಿ, 30 ದಿನಗಳ ಒಳಗೆ ಕಾರ್ಡ್‌ಧಾರಕರಿಗೆ ತಿಳಿಸಲಾಗುತ್ತದೆ.
6. ಈ ಬದಲಾವಣೆಗಳು ಮತ್ತು ಇತರೆ ಯಾವುದೇ ಬದಲಾವಣೆಗಳ ಬಗ್ಗೆ ಸೂಚನೆಗಳನ್ನು ಬ್ಯಾಂಕ್ ಅಕ್ಷಿಸ್ ಬ್ಯಾಂಕ್ ವೆಬ್‌ಸೈಟ್ www.axis.bank.in ಮೂಲಕ ಕಾರ್ಡ್‌ಧಾರಕರಿಗೆ ಒದಗಿಸಬಹುದು.
7. ಈ ನಿಯಮಗಳು ಮತ್ತು ಷರತ್ತುಗಳ ಬದಲಾವಣೆ ಕುರಿತು ಸೂಚನೆಯನ್ನು ಅಕ್ಷಿಸ್ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕವೂ ಬ್ಯಾಂಕ್ ಕಾರ್ಡ್‌ಧಾರಕರಿಗೆ ನೀಡಬಹುದು.
8. ಈ ನಿಯಮಗಳು ಮತ್ತು ಷರತ್ತುಗಳು: 1) ಹಿಂದೆ ಮಾಡಲಾದ ಯಾವುದೇ ಪ್ರಸ್ತಾವನೆಗಳು, ಪ್ರತಿನಿಧಿತ್ವಗಳು, ತಿಳುವಳಿಕೆಗಳು ಮತ್ತು ಒಪ್ಪಂದಗಳ (ಸ್ಪಷ್ಟವಾಗಿರಲಿ ಅಥವಾ ಪರೋಕ್ಷವಾಗಿರಲಿ, ಮೌಖಿಕವಾಗಿರಲಿ ಅಥವಾ ಲಿಖಿತವಾಗಿರಲಿ) ಮೇಲೆ ಮೇಲುಗೈ ಸಾಧಿಸುತ್ತವೆ; ಮತ್ತು 2) ಬ್ಯಾಂಕ್‌ನ ಠೇವಣಿ ಖಾತೆಗೆ ಅನ್ವಯಿಸುವ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು ಹಾಗೂ ಬ್ಯಾಂಕ್‌ನ ಇತರೆ ಅನ್ವಯಿಸುವ ನಿಯಮಗಳು ಮತ್ತು ಷರತ್ತುಗಳಿಗೆ ಹೆಚ್ಚುವರಿಯಾಗಿ ಅನ್ವಯಿಸುತ್ತವೆ. ಆದಾಗ್ಯೂ, ಯಾವುದೇ ವಿರೋಧಾಭಾಸ ಉಂಟಾದಲ್ಲಿ, ವರ್ಚುವಲ್ ಗಿಫ್ಟ್ ಕಾರ್ಡ್ ಸೌಲಭ್ಯಕ್ಕೆ ಸಂಬಂಧಿಸಿದ ವ್ಯವಹಾರಗಳ ಕುರಿತು ಈ ವರ್ಚುವಲ್ ಗಿಫ್ಟ್ ಕಾರ್ಡ್ ನಿಯಮಗಳು ಮತ್ತು ಷರತ್ತುಗಳು ಮೇಲುಗೈ ಸಾಧಿಸುತ್ತವೆ.

**ಕಾನೂನು ಪಾಲನೆ**

ಅಕ್ಷಿಸ್ ಬ್ಯಾಂಕ್ ಒದಗಿಸುವ ವರ್ಚುವಲ್ ಗಿಫ್ಟ್ ಕಾರ್ಡ್ ಉತ್ಪನ್ನವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸೇರಿದಂತೆ ನಿಯಂತ್ರಣಾತ್ಮಕ ಮತ್ತು / ಅಥವಾ ಶಾಸನಾತ್ಮಕ ಪ್ರಾಧಿಕಾರಗಳು ವಿಧಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ವರ್ಚುವಲ್ ಗಿಫ್ಟ್ ಕಾರ್ಡ್‌ಗೆ ಸಂಬಂಧಿಸಿದ ವಿಧಿಗಳು ನಿಯಂತ್ರಣಾತ್ಮಕ ಅಗತ್ಯತೆಗಳು ಮತ್ತು / ಅಥವಾ ಅಕ್ಷಿಸ್ ಬ್ಯಾಂಕ್‌ನ ಆಂತರಿಕ ನೀತಿಯ ಪ್ರಕಾರ ಬದಲಾಗಬಹುದು. ಇಲ್ಲಿ ಒದಗಿಸಲಾದ ವರ್ಚುವಲ್ ಗಿಫ್ಟ್ ಕಾರ್ಡ್ ಸೌಲಭ್ಯ ಮತ್ತು ಈ ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುವ ಕಾನೂನುಗಳು ಮತ್ತು

ನಿಯಮಾವಳಿಗಳಿಗೆ ಒಳಪಟ್ಟಿರುತ್ತವೆ ಮತ್ತು ಯಾವುದೇ ಸಮಯದಲ್ಲಿ ಜಾರಿಗೆ ಇರುವ ಕಾನೂನು ಅಥವಾ ನಿಯಮಾವಳಿಗಳ ಆಧಾರದ ಮೇಲೆ ತಿದ್ದುಪಡಿ ಮಾಡಲಾಗಬಹುದು ಅಥವಾ ಸ್ಥಗಿತಗೊಳಿಸಲಾಗಬಹುದು. ಆ ಸಮಯದಲ್ಲಿ ಜಾರಿಗೆ ಇರುವ ಅಥವಾ ತಿದ್ದುಪಡಿ ಮಾಡಲಾದ ಕಾನೂನುಗಳಿಗೆ ಅನುಗುಣವಾಗಿ ನಿಯಮಗಳು ತಿದ್ದುಪಡಿ ಮಾಡಲಾಗುವವರೆಗೆ, ಉಲ್ಲೇಖಿತ ಕಾರ್ಡ್ ಸೌಲಭ್ಯವನ್ನು ಮುಂದುವರಿಸಲು ಬ್ಯಾಂಕ್ ಯಾವುದೇ ಹೊಣೆಗಾರಿಕೆ ಅಥವಾ ಬಾಧ್ಯತೆಯಡಿಯಲ್ಲಿ ಇರುವುದಿಲ್ಲ. ಯಾವುದೇ ಸಮಯದಲ್ಲಿ ಜಾರಿಗೆ ಇರುವ ಕಾನೂನುಗಳಿಗೆ ಸಂಪೂರ್ಣ ಅನುಸರಣೆ ಇಲ್ಲದೆ ಕಾರ್ಡ್ ಸೌಲಭ್ಯವನ್ನು ಮುಂದುವರಿಸಲಾಗದ ಪರಿಸ್ಥಿತಿ ಉಂಟಾದಲ್ಲಿ, ಈ ಒಪ್ಪಂದ / ನಿಯಮಗಳು ಮತ್ತು ಷರತ್ತುಗಳು, ವ್ಯವಸ್ಥೆಯನ್ನು ನಿರ್ಬಂಧಿಸುವ ಅಥವಾ ನಿಷೇಧಿಸುವ ತಿದ್ದುಪಡಿ ಕಾನೂನು ಜಾರಿಗೆ ಬರುವ ದಿನಾಂಕದಿಂದ ತಕ್ಷಣವೇ ರದ್ದುಗೊಂಡಿವೆ ಎಂದು ಪರಿಗಣಿಸಲಾಗುತ್ತದೆ.

**ಆಡಳಿತ ಕಾನೂನು ಮತ್ತು ನ್ಯಾಯಾಧಿಕಾರ**

ಈ ನಿಯಮಗಳು ಮತ್ತು ಷರತ್ತುಗಳು ಮತ್ತು / ಅಥವಾ ವ್ಯವಹಾರಗಳು ಭಾರತೀಯ ಕಾನೂನುಗಳ ಪ್ರಕಾರ ಆಡಳಿತಗೊಳ್ಳುತ್ತವೆ. ಕಾರ್ಡ್ ಬಳಕೆಯಿಂದ ಉಂಟಾಗುವ ಯಾವುದೇ ದಾವೆಗಳು ಅಥವಾ ವಿಷಯಗಳಿಗೆ ಸಂಬಂಧಿಸಿದಂತೆ ಮುಂಬೈಯಲ್ಲಿನ ಎಲ್ಲಾ ನ್ಯಾಯಾಲಯಗಳಿಗೆ ಮಾತ್ರ ವಿಶೇಷ ನ್ಯಾಯಾಧಿಕಾರ ಇರುತ್ತದೆ.